ed No. M. 1393. ೧೦ ಪುಟ

ಸಂಪುಟ ೨೩ | ಮಂಗಳೂರು, ೧೯೪೧ನೇ ಇಸವಿ ಸಪ್ಟಂಬರ ತಾರೀಕು ೨೬ನೇ ಶುಕ್ರವಾರ | ಸಂಚಿಕೆ ೫೨
VOL. XXIII | MANGALORE, FRIDAY, SEPTEMBER 26, 1941 | NO. 52

ರಷ್ಯದ ಯುದ್ಧದ ವಿವಿಧ ವಿದ್ಯಮಾನಗಳು!

ಈಚಿಗೆ ಬಂದಿರುವ ವಾರ್ತೆಗಳ ಮೇರೆಗೆ, ರಷ್ಯದ ಪೂರ್ವ ರಣಾಂಗಣದ ಸಮಾಚಾರಗಳೇನೂ ಅಷ್ಟೊಂದು ಉತ್ತೇಜಕವಾಗಿಲ್ಲ. ಮಧ್ಯ ರಣರಂಗದ ಹೊರತಾದ ಇತರ ಕಡೆಗಳಲ್ಲಿ, ರಷ್ಯದ ಸೇನೆಗಳು ರಕ್ಷಣೆಯ ಕಾರ್ಯಗಳಲ್ಲೇ ಆಸಕ್ತವಾಗಿರುವಂತೆ ತೋರುತ್ತಿದೆ. ಕೀವ್ ಕೈತಪ್ಪಿತು; ಲೆನಿನ್‌ಗ್ರಾಡ್ ಗಭ್ಗೀರವಾಗಿ ಬೆದರಿಸಲ್ಪಡುತ್ತಿದೆ; ಒಡೆಸ್ಸದ ಮೇಲಿನ ದಾಳಿಯ ಭರವನ್ನೂ ಜರ್ಮನರು ಬೇಗನೇ ಹೆಚ್ಚಿಸಬಹುದು! ಕಳೆದವಾರ, ರಷ್ಯದ ಉತ್ತರ ಮಾರ್ಗವನ್ನು ಕಡಿದು ಬಿಡುವಂತೆ, ಜರ್ಮನರು ಮರ್‌ಮನ್ ಸ್ಕ್‌ನ ಬಳಿಯೊಂದು ಹೊಸ ದಾಳಿಯನ್ನಾರಂಭಿಸಿದ್ದರು; ಆದರೆ ಅದು ಸದ್ಯ ಫಲಕಾರಿಯಾಗದಿರುವುದು ಇಲ್ಲಿ ಪ್ರಸ್ತಾವಿಸತಕ್ಕ, ಸಂತೋಷಿಸತಕ್ಕ ವಿಷಯವೇ.

ಉತ್ತರದಲ್ಲಿ, ಲೆನಿನ್‌ಗ್ರಾಡಿನ ಪ್ರಾಮುಖ್ಯತೆಯನ್ನು ಎಲ್ಲರೂ ಬಲ್ಲರು. ಆ ನಗರವು ಆ ಪ್ರಾಂತಕ್ಕೊಂದು ಬೀಗದ ಕೈ ಇದ್ದಂತೆ,–ಆದಕಾರಣ ಈ ಕೋಟೆಯನ್ನು ಜರ್ಮನರು ಹಿಡಿದ ಪಕ್ಷದಲ್ಲಿ ಪಶ್ಚಿಮ ಭಾಗದ ಒಂದು ಕಿಟಿಕಿಯೇ ಮುಚ್ಚಿ ಹೋದಂತಾಗುವುದು. ಲೆನಿನ್‌ಗ್ರಾಡ್ ಜರ್ಮನರ ಕೈವಶವಾಗುವುದರಿಂದ, ಜರ್ಮನಿಗೊಂದು ಅಮೂಲ್ಯ ಹಡಗಿನ ಕ್ಷೇತ್ರವೂ, ಹಲವು ಮದ್ದುಗುಂಡಿನ ಕಾರ್ಖಾನೆಗಳೂ ಲಭಿಸುವವಷ್ಟೇ ಅಲ್ಲ; ಮುಂದೆ ಮಾಸ್ಕೋವನ್ನು ಆಕ್ರಮಿಸಲೂ ಅನುಕೂಲವಾಗುವ ಒಂದು ನಿಲ್ದಾಣವೂ ಅವರಿಗೆ ದೊರಕಿದಂತಾಗುವುದು. ಹೀಗೆ, ಈ ನಗರವು ಒಂದು ಅಮೂಲ್ಯ ಭಂಡಾರವಾಗಿರುವುದರಿಂದ, ಅದನ್ನು ಉಳಿಸಿಕೊಳ್ಳಲು ರಷ್ಯದವರು ಕೊನೆತನಕವೂ ಕಾದಾಡುವುದೇನೋ ಖಂಡಿತವೇ. ಈಗ ಕೆಲವು ವಾರಗಳಿಂದ ಆ ನಗರದ ಅಕ್ಕಪಕ್ಕಗಳಲ್ಲಿ ಅಸಾಧ್ಯವಾದ ಘೋರ ಯದ್ಧ ನಡೆಯುತ್ತಿದೆ. ಆದರೂ ಇದು ವರೆಗೆ ಜರ್ಮನರು ಅಲ್ಲಿನ ರಷ್ಯದ ಸೇನಾಬಲವನ್ನು ಮುರಿದು ಸುದ್ದಿ ಇಲ್ಲದಿರುವುದು ಜರ್ಮನಿಗೆ ಕೊಂಚ ನಿರಾಶೆಯನ್ನು ಉಂಟು ಮಾಡಿದೆ!

ಇತ್ತ ಜರ್ಮನರು ಕೀವ್‌ನ್ನು ಮಾತ್ರವೇ ವಶಪಡಿಸಿಕೊಂಡಿರುವುದಲ್ಲ; ಅದಕ್ಕಿಂತಲೂ ಮುಂದಕ್ಕೆ ಹೋಗಿರುತ್ತಾರೆ. ಅವರೆಷ್ಟು ಮುಂಬರಿದಿದ್ದಾರೆ ಎಂದರೆ–ಉಕ್ರೈನಿನ ದಾಳಿಯೂ ಬೇಗನೆ ಪೂರೈಸಬಹುದೆಂದು ತೋರುವುದೇ ಅಲ್ಲದೆ, ಡಾನ್ ಬೇಸಿನಿನಲ್ಲಿಯೂ, ಕೌಕಸಸ್ಸಿನಲ್ಲಿಯೂ ಗಭೀರ, ವಿಷಮ ಪರಿಸ್ಥಿತಿಯುಂಟಾಗುವುದೂ ಅಸಂಭವವಲ್ಲ.

ಅಜೋವಾ ಸಮುದ್ರ, ಕ್ರಿಮಿಯಾ ಮತ್ತು ಕಾಕಸಸ್ಸಿನ ಕಡೆಗಳ ಆಕ್ರಮಣವು, ಕಪ್ಪುಸಮುದ್ರದಲ್ಲಿನ ನೌಕಾಬಲದ ಬೆಂಬಲದಿಂದ ಸುಲಭವಾಗುತ್ತಿದೆ. ಈ ಕಾರಣದಿಂದಲೇ, ಈಗ ಎಕ್ಸಿಸ್ ರಾಷ್ಟ್ರಗಳು ಬಲ್ಗೇರಿಯದ ಮೇಲೆ ಇಷ್ಟೊಂದು ಒತ್ತಾಯ ಹೇರುತ್ತಿರುವುದು! ಇಷ್ಟರಲ್ಲಾಗಲೇ, ಜರ್ಮನಿಯ 'ಇ'ಬೋಟುಗಳು ಬಲ್ಗೇರಿಯಾ–ರುಮೇನಿಯಾ ಬಂದರುಗಳಲ್ಲಿ ಬಂದು ಸೇರಿಕೊಂಡಿವೆಯಂತೆ. ಮಾತ್ರವಲ್ಲ; ಬಲ್ಗೇರಿಯದ ಧ್ವಜದ ಕೆಳಗೆ ಪ್ರಯಾಣ ಮಾಡುತ್ತಿರುವ ಇಟೆಲಿ ಹಡಗುಗಳೂ "ಸ್ಟೆಟ್ಟಿನ" ಮೂಲಕ ಕಪ್ಪುಸಮುದ್ರವನ್ನು ಪ್ರವೇಶಿಸುವವೆಂಬ ವದಂತಿಯೂ ಹರಡಿದೆ. ಮೊಸ್ಕೋ, ಎಕ್ಸಿಸಿನ ಪರನಾದ ಬಲ್ಗೇರಿಯದ ನಡವಳಿಕೆಯ ಕುರಿತು, ಅದನ್ನು ಎಚ್ಚರಿಸಿದೆಯೇನೋ ನಿಜ; ಬ್ರಿಟನೂ, ಬಲ್ಗೇರಿಯವೂ ಒಂದು "ಯುದ್ಧಾಸಕ್ತ ರಾಷ್ಟ್ರ, ಆದುದರಿಂದ ಮಾಂಟ್ರಿ ಸಂಧಿಯ ರಿಯಾಯಿತಿಗಳು ಅದಕ್ಕೆ ಸಲ್ಲಕೂಡದೆಂದು" ಟರ್ಕಿಗೆ ತಿಳಿಸಿದೆಯೇನೋ ನಿಜ. ಆದರೂ ಏನು? ಈ ಎಚ್ಚರಿಕೆಗಳಾಗಲೀ, ಬಲ್ಗೇರಿಯದ ಸ್ಲಾವ್ ಮುಂದಿಯ ರಷ್ಯದ ಮೇಲಿರುವ ಅಭಿಮಾನವಾಗಲೀ ಹಿಟ್ಲರನನ್ನು ಅವನ ಕಪ್ಪುಸಮುದ್ರದಲ್ಲಿನ ನೌಕಾ ಆಕ್ರಮಣದಿಂದ, ಅವನು ಆಕ್ರಮಿಸಲು ನಿರ್ಧರಿಸಿದ್ದರೆ, ಹಿಂದೆಗೆಯುವಂತೆ ಮಾಡಲಾರವು.

ಬಲ್ಗೇರಿಯದ ಅರಸ ಬೋರೀಸರು ಸಂಪೂರ್ಣವಾಗಿಯೂ ಈಗ ನಾಜಿಗಳ ಹಿಡಿತದಲ್ಲಿದ್ದಾರೆ. ನಾಜಿಗಳ ಸುಪ್ರಸನ್ನತೆ, ದಯೆ ಅವರಿಗೀಗ ಬೇಕು. ಈ ಕಾರಣದಿಂದ, ಇನ್ನೊಂದು ಸಣ್ಣ ರಾಷ್ಟ್ರವು, ಅದಕ್ಕಿಷ್ಟವಿಲ್ಲದಿದ್ದರೂ, ಯಾವ ರಷ್ಯದೊಡನೆ ತನ್ನ ನಿಕಟ ಸಂಬಂಧವಿರಿಸಿಕೊಂಡಿದೆಯೋ, ಕುಲ ಸಂಸ್ಕೃತಿಗಳ ಬಾಂಧವ್ಯಗಳನ್ನುಳ್ಳುದಾಗಿದೆಯೋ ಆ ರಷ್ಯದೊಡನೆ ಯುದ್ಧಕ್ಕಿಳಿಯುವಂತಾಗಿದೆ. ಇದರಿಂದ ರಷ್ಯಕ್ಕೆ ಬಹಳ ತೊಂದರೆ. ಕಾರಣ ಇದರಿಂದ ರಷ್ಯದ ಕೈಗಾರಿಕೆ ಕಾರ್ಖಾನೆಗಳಿಗೂ, ದಕ್ಷಿಣ ಪೂರ್ವ ಯುರೋಪಿನ ವಹಿವಾಟುಗಳ ಸಾಧನಗಳಿಗೂ ಅಧಿಕವಾದ ಅಪಾಯಗಳಿವೆ. ರಷ್ಯಕ್ಕೆ ಸೈಬೀರಿಯ ಮೊದಲಾದ ಕಡೆ ಫ್ಯಾಕ್ಟರಿಗಳಿವೆ; ಜಗತ್ತಿನ ಸಂಬಂಧವಿರುವ ಇತರ ವಹಿವಾಟುಗಳ ಸಾಧನಗಳಿವೆ; ನಿಜ. ಆದರೆ ಅವೆಲ್ಲ ಅಷ್ಟೊಂದು ಮುಖ್ಯವಲ್ಲ.

ರಷ್ಯದವರೀ ವರೆಗೂ ಅಪ್ರತಿಮ ಸಾಹಸದಿಂದ ಕಾದಾಡಿದ್ದಾರೆ. ಅವರಿಗಿನ್ನು ಅನ್ಯರ ಸಹಾಯ ಜರೂರಾಗಿ ಬೇಕು. ಅವರು ಶತ್ರುಗಳಿಗೆ ಅಪಾರವಾದ ನಷ್ಟವನ್ನು ಉಂಟುಮಾಡಿದವರು. ಅವರು ಜರ್ಮನಿಯ ಸೇನಾ ಸಾಮಗ್ರಿಗಳನ್ನೆಲ್ಲ ಪೂರ್ವ ರಣರಂಗವೊಂದರಲ್ಲೇ ತಂದು ತುಂಬುವಂತೆ ಬಲಾತ್ಕರಿಸಿದವರು. ಹಾಗೆ ಮಿತ್ರರ ಉದ್ದೇಶ ಸಾಧನೆಗೆ ವಿಶೇಷ ಸಹಾಯ ಮಾಡಿದವರು. ಈ ಕಾರಣದಿಂದ ಮಿತ್ರರು ಶಕ್ಯವಿರುವ ಸಹಾಯವನ್ನೆಲ್ಲ ಕೂಡಲೇ ರಷ್ಯಕ್ಕೆ ಕಳುಹಿಸಿ ತಮ್ಮ ಮತ್ತು ರಷ್ಯದ ಹಿತಾಸಕ್ತಿಯ ಪಾಲನೆ ಮಾಡುವುದು ಅತ್ಯಗತ್ಯ!

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/–

ಪಾಲ್ಘಾಟು ಮುನಿಸಿಪಲ್ ಕೌನ್ಸಿಲಿನ ವಿಸರ್ಜನೆ

ಈ ಕೌನ್ಸಿಲಿನ ೨೮ ಮಂದಿ ಕೌನ್ಸಿಲರುಗಳಲ್ಲಿ ೨೪ ಮಂದಿ ರಾಜಿ ಕೊಟ್ಟದ್ದರಿಂದ, ಅದರ ಕಾರ್ಯಕಲಾಪಗಳು ನಿಂತಿದೆ, ಹಾಗೆ ಆ ಕೌನ್ಸಿಲನ್ನು ವಿಸರ್ಜಿಸಬೇಕೆಂದು ಮದ್ರಾಸ್ ಸರಕಾರದ ಅಪ್ಪಣೆಯಾಗಿದೆ.

ಡಾ. ಟಿ. ಎಸ್. ಎಸ್. ರಾಜನ್‌ರವರ ಬಿಡುಗಡೆ

ಮದ್ರಾಸಿನ ಮಾಜಿ ಮಂತ್ರಿಗಳೂ ತಮಿಳು ನಾಡಿನ ಪ್ರಥಮ ಸತ್ಯಾಗ್ರಹಿಗಳೂ ಆಗಿರುವ ಡಾ. ಟಿ. ಎಸ್. ಎಸ್. ರಾಜನ್‌ರವರು ತಿರುಚಿನಾಪಳ್ಳಿಯ ಜೈಲಿನಿಂದ ಬಿಡುಗಡೆ ಹೊಂದಿದರು. ಅವರ ಸ್ವಾಗತಕ್ಕಾಗಿ ಹಲವು ಮಂದಿ ಪ್ರಮುಖರು ಜೈಲಿನ ಬಳಿ ನೆರೆದಿದ್ದು ಅವರನ್ನು ಎದುರುಗೊಂಡು ಗೌರವಿಸಿದರು.

ಬಲ್ಗೇರಿಯಾ ಯುದ್ಧಕ್ಕೆ ಹೊರಡಲಿದೆ!

ಬೋರಿಸ್—ಹಿಟ್ಲರರ ಭೇಟಿ

ಬಲ್ಗೇರಿಯದ ಅರಸ ಬೋರಿಸರು ಹಿಟ್ಲರರೊಡನೆ ಭೇಟಿಮಾಡಲು ಹೊರಟಿರುವರಾಗಿ ವಾರ್ತೆ. ಈ ಭೇಟಿಯ ಪರಿಣಾಮವಾಗಿ ರಷ್ಯ-ಬಲ್ಗೇರಿಯಗಳ ಸಂಬಂಧ ಕಡಿಯಬಹುದೆಂದು ನಿರೀಕ್ಷಿಸಲಾಗಿದೆ. ಈ ಭೇಟಿ ಪೂರ್ವ ರಣರಂಗದಲ್ಲಿ ಹಿಟ್ಲರಿನ ಹೆಡ್ ಕ್ವಾಟರ್ಸಿನಲ್ಲಿ ನಡೆಯುವುದಂತೆ.

ಪೂರ್ವ ರಣಾಂಗಣದಲ್ಲಿ ಜರ್ಮನಿಗೆ ಉಂಟಾದ ವಿಜಯವು ಬೋರೀಸರನ್ನು ಜರ್ಮನರ ಕೇಳಿಕೆಗೊಪ್ಪುವಂತೆ ಮಾಡಬಹುದಾಗಿದೆ. ಒಂದು ವೇಳೆ ಬೋರಿಸರು ತಾವು ರಷ್ಯದೊಡನೆ ಯುದ್ಧಕ್ಕಿಳಿಯಲಾರೆವೆಂದಿನ್ನೂ ತಿರಸ್ಕರಿಸಬಹುದಾದರೂ ಹಾಗೆ ತಿರಸ್ಕರಿಸುವ ಸಂಭವ ಕಡಿಮೆ. ಅಥವಾ ಬಲ್ಗೇರಿಯಯವೇ ತಿರಸ್ಕರಿಸಿದರೂ ರಷ್ಯ ತನ್ನ ಸಂಬಂಧ ಕಡಿದುಕೊಳ್ಳಬಹುದಾಗಿದೆ. ಹೇಗೂ ಬಲ್ಗೇರಿಯದೊಡನೆ ಕಾಳಗ ಕೆಲವು ದಿನಗಳ ಮಾತೆಂದು ಹೇಳಲಾಗಿದೆ.

ಬಲ್ಗೇರಿಯವು ಸಾಮಾನ್ಯವಾಗಿ ಆಗಲೇ ನಾಜಿಗಳ ಹಿಡಿತಕ್ಕೆ ಒಳಗಾದ ಒಂದು ದೇಶದ ಹಾಗಿದೆ. ರಷ್ಯದವರ ಒಂದು ಪತ್ರಕ್ಕೆ ಅದು ಬರೆದ ಉತ್ತರವು ಸಮರ್ಪಕವಾಗಿಲ್ಲ. ಅಲ್ಲಿನ ರೈತತೇನೋ ರಷ್ಯದ ಪರವಾಗಿರುವುದು ನಿಜ. ಅದು ಬಲ್ಗೇರಿಯಾ ಸರಕಾರಕ್ಕೂ ತಿಳಿದೇ ಇದೆ. ಆದರೆ ಇದನ್ನು ಮುರಿದೊತ್ತಲು ಆ ಸರಕಾರ ಪ್ರಯತ್ನಿಸಿದೆ, ಹಾಗೆ ಜರ್ಮನಿಯನ್ನು ಒಲಿಸಿಕೊಳ್ಳಲು ಸೇಚಕೆಡಿದೆ ಎಂಬುದನ್ನು, ನಾವು ಮರೆಯಬಾರದು. ಮೊದಲಾಗಿ ಬಲ್ಗೇರಿಯಾ ಸೇನೆಗಳನ್ನು ಪುನರ್ ವ್ಯವಸ್ಥೆಗೊಳಿಸಲಾಗಿದೆ; ರಷ್ಯದ್ದ ಪರವಾಗಿ, ನಾಜಿ ವಿರೋಧಿಗಳಾಗಿ ಇರುವ ಯಾವತು ಸೇನಾಧಿಕಾರಿಗಳನ್ನೂ ಹೊರತಳ್ಳಲಾಗಿದೆ; ಕೆಲವು ಸಂದರ್ಭಗಳಲ್ಲಿ, ಸರಕಾರಕ್ಕೆ ದ್ರೋಹವೆಣಿಸಿದವರೆಂದು ಭಾರೀ ದಂಡನೆಗಳನ್ನು—ಕೆಲವರ್ಗಿಗೆ ಮರಣದಂಡನೆಯನ್ನೂ—ವಿಧಿಸಲಾಗಿದೆ. ಬಲ್ಗೇರಿಯಾ ಸರಕಾರದ ರೀತಿನೀತಿಗಳನ್ನು ಟೀಕಿಸಿದುದೂ ಕೂಡ, ಆ ದಂಡನೆಗಳಿಗೆ ಕಾರಣ!

ಬಲ್ಗೇರಿಯಾ ಈಚೆಗೆ ನಾಜಿ ಗೆಸ್ಟೆಪೋ ದಳದಂತೆ ಗುಪ್ತ ಭಯೋತ್ಪಾದಕ ಪೋಲೀಸ್ ಗುಂಪನ್ನು ಏರ್ಪಡಿಸಿಕೊಂಡಿದೆ. ಇದರ ಈಚೆಗಿನ, ೨ ತಿಂಗಳ ಚಟುವಟಿಕೆಗಳಿಂದ, ಬಲ್ಗೇರಿಯದಲ್ಲಿ ಹಲವರ ಗತಿ ಮುಗಿದಿದೆ. ಅಲ್ಲಿನ "ಕನ್ ಸೆಂಟ್ರೇಶನ್ ಕ್ಯಾಂಪು"ಗಳು ಈಗ ನಾಜೀ ಕ್ಯಾಂಪುಗಳಷ್ಟೇ ಪ್ರಸಿದ್ಧಿಗೆ ಬಂದಿವೆ.

ಈ ಯುದ್ಧದಲ್ಲಿ ಬಲ್ಗೇರಿಯಕ್ಕೆ ಯುಗೋಸ್ಲಾವಿಯಾ, ಗ್ರೀಸಿನ ಥ್ರೇಸು ಗಳಲ್ಲಿ ಸಣ್ಣ ಪಾಲುಗಳು ಸಿಕ್ಕಿವೆಯಾಗಿ ಹಿಟ್ಲರು ಅದರ ಮರುಪಾವತಿಗಾಗಿ ಬೋರಿಸರನ್ನು ಈಗ ಒತ್ತಾಯಪಡಿಸುತ್ತಿದ್ದಾನೆ. ಕೊಳ್ಳೆಯಲ್ಲಿ ಪಾಲು ಬೇಕು, ಯುದ್ಧ ಬೇಡ ಎಂದರೆ ಹಿಟ್ಲರ್ ಬಿಟ್ಟಾನೇ?

ಬಲ್ಗೇರಿಯದಲ್ಲಿ ಅಶಾಂತಿ ಹರಡಿದೆ. ಬಲ್ಗೇರಿಯದ ಆಭ್ಯಂತರದಲ್ಲಿಯೂ ಗುಂಡು, ಕೊಲೆ, ಸರಕಾರದ ವಿರುದ್ಧವಾದ ಪ್ರದರ್ಶನಗಳು ನಡೆದಿವೆ. ಮುಂದಿನ ವಿದ್ಯಮಾನಗಳು ನಿರೀಕ್ಷಣೀಯವಾಗಿದೆ.

ಕೀವ್ ನಗರದಿಂದ ಒಕ್ಕಲು ತೆಗೆದರು

ತಾವು ಕೀವ್ ನಗರದಿಂದ ಒಕ್ಕಲು ತೆಗೆದೆವೆಂದು ರಷ್ಯದವರು ತಾವೇ ಒಪ್ಪಿಕೊಂಡಿದ್ದಾರೆ. ಆದರೆ ರಷ್ಯದ ಸೇನೆಗಳು ನೀಪಿಯರಿನಲ್ಲಿರುವ ಹೊರಿಟ್ಸಾ ದ್ವೀಪವನ್ನೂ ತಿರುಗಿ ಹಿಡಿದ ವಾರ್ತೆಯೂ ಬಂದಿದೆ.

ಜರ್ಮನರು ಅಜೋವಾ ಸಮುದ್ರದ ಬಳಿಗೆ ಮುಟ್ಟಿದ್ದಾರೆ. ೧೪೦೦೦ ಕೈದಿಗಳನ್ನೂ ೧೫೧ ಟ್ಯಾಂಕು, ೬೦ ಕೋವಿ ಇತ್ಯಾದಿಗಳನ್ನೂ ತಾವು ಹಿಡಿದಿರುವುದಾಗಿ ಜರ್ಮನರ ಹೇಳಿಕೆ. ಆದರೆ ಕೀವ್ ನಗರದ ಧ್ವಂಸಕಾರ್ಯ ಪೂರ್ಣವಾಗಿದೆ; ಯಾವತ್ತು ಸರಬರಾಯಿಗಳನ್ನು ಸಾಗಿಸಲಾಗಿದೆ; ನೀರಾವರಿಯ ವಿದ್ಯುಚ್ಛಕ್ತಿಯ ಕಾಮಗಾರಿಗಳನ್ನೆಲ್ಲ ನಿರ್ಮೂಲ ಮಾಡಲಾಗಿದೆ; ರೈಲ್ವೆ ಮೊದಲಾದವೆಲ್ಲ ಪುಡಿ ಧೂಳಾಗಿವೆ.

ಜರ್ಮನ್ ಸೇನೆಗಳು ಅಜೋವದ ಸಮುದ್ರದ ಬಳಿಗೆ ಮುಟ್ಟಿವೆ. ಹಾಗೆ ಕ್ರಿಮಿಯವನ್ನು ಬೇರ್ಪಡಿಸಲಾಗಿದೆ ಎಂದೂ ಜರ್ಮನರ ವಾರ್ತೆ.

ಸಿರಿಯಕ್ಕೆ ಸ್ವಾತಂತ್ರ್ಯ

ಮಿತ್ರರ ಪರವಾಗಿ ಸಿರಿಯದ ಸ್ವತಂತ್ರ ಫ್ರಾನ್ಸಿನ ಸೇನೆಗಳ ಅಧಿಪತಿಯು ದಾನ ಮಾಡಿದ ಹಾಗೂ ಆ ಸ್ವಾತಂತ್ರ್ಯವನ್ನು ಪಡೆದ ಆ ಸಿರಿಯಾ ದೇಶೀಯರನ್ನು, ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಕಳೆದ ಸುಮಾರು ಇಪ್ಪತ್ತು ವರ್ಷಗಳ ಕಾಲದಲ್ಲಿ, ಜನಾಂಗ ಸಂಘಕ್ಕಾಗಿ, ಫ್ರಾನ್ಸು ಆ ದೇಶವನ್ನಾಳುತ್ತಿದ್ದು ಆಗ ಯಾವ ಕಾಲದಲ್ಲಿಯೂ ಸಿರಿಯವು ಸ್ವತಂತ್ರವೆನ್ನಿಸಲು ಯೋಗ್ಯವಲ್ಲದೆ ಹೋದರೂ, ಯುದ್ಧದ ಒತ್ತಾಟವು, ಈಗಲಾದರೂ ಆ ಯೋಗ್ಯತೆಯನ್ನು ಅವರಲ್ಲಿ ಕಂಡು ಅವರಿಗೆ ಸ್ವಾತಂತ್ರ್ಯವನ್ನು ಕೊಡಿಸುವಂತಾದುದು ಅದು ಅವರ ಭಾಗ್ಯ. ಇನ್ನು ಅಕಸ್ಮಾತ್ತಾಗಿ ದೊರಕಿದ ಸಿರಿಯದವರ ಈ ಸ್ವಾತಂತ್ರ್ಯವು ಚಿರಕಾಲ ಬಾಳುವಂತಾಗಲಿ! ಎಂದಿಷ್ಟೇ ಹಾರೈಕೆಯಲ್ಲದೆ ಇನ್ನೇನು ಆಶಿಸಬಹುದು?

ಶರೀರ ಲಾವಣ್ಯವೇ

ಸ್ತ್ರೀಯರು ಆಕರ್ಷಣೀಯ ರಾಗಲು ಮುಖ್ಯ ಸಾಧನ.

ಮೈಸೂರು ಸ್ಯಾಂಡಲ್ ಸೋಪು

ಸೌಂದರ್ಯಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಬಗೆಹರಿಸಿದೆ. ಸುವಾಸನಾಯುಕ್ತವಾದ ಮೈಸೂರು ಗಂಧದೆಣ್ಣೆಯಿಂದ ದಿವ್ಯವಾಗಿ ಪರಿಮಳಿತವಾಗಿರುವ ಈ ಸಾಬೂನಿನ ಉಪಯೋಗದಿಂದ ಆಪ್ಯಾಯಮಾನರಾಗುವುದು ಅತಿಸುಲಭ.

ಎಲ್ಲ ಕಡೆಯೂ ದೊರೆಯುತ್ತದೆ

ಮೈಸೂರು ಸ್ಯಾಂಡಲ್ ಸೋಪು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಕೆಮ್ಮು, ಫ್ಲೂ ಮತ್ತು ಎದೆಯ ಬಾಧೆಗಳನ್ನು ದೂರೀಕರಿಸಿ.

ನೀವು ಕೆಮ್ಮು, ನೆಗಡಿ, ಗೊರಲು, ಅಥವಾ ಗಂಟಲು ಬೇನೆಯಿಂದ ನರಳುವಿರಾದರೆ ಪೆಪ್ಸ್ ಕ್ರಿಮಿನಾಶಕ, ಶ್ವಾಸನೀಯ ಬಿಲ್ಲೆಗಳು ನಿಮಗೆ ಖಾತ್ರಿ ಚಿಕಿತ್ಸೆ.

ಪೆಪ್ಸ್ ಬಾಯಲ್ಲಿ ಕರಗಿ, ಅಮೂಲ್ಯ ಔಷಧೀಯ ಸಾರಗಳನ್ನು ಹೊರಸೂಸುವುದು; ಇವು ನಿಮ್ಮ ಶ್ವಾಸದೊಂದಿಗೆ ಪುಪ್ಪುಸಗಳೊಳಗೆ ಆಳಕ್ಕೆ ಸೇರುವುವು. ಹಾಗೆ ಪೆಪ್ಸ್ ಜಾಗ್ರತೆಯಾಗಿ ವಿಷಾಣುಗಳನ್ನು ನೀಗಿಸುವುದು, ಇವು ರಕ್ತ ಸಂಚಯವನ್ನು ಹದಗೊಳಿಸಿ, ಉಸಿರುಗಟ್ಟಿಸುವ ಕಫವನ್ನು ತುಂಡರಿಸಿ, ಸಡಿಲಿಸುತ್ತಿವೆ. ಪೆಪ್ಸ್ ನಿಮ್ಮ ಗಂಟಲನ್ನು ಶಾಂತಗೊಳಿಸಿ, ಎದೆ ಮತ್ತು ಪುಪ್ಪುಸಗಳಿಗೆ ಮಹತ್ತಾದ ರಕ್ಷಣೆಗೊಡುತ್ತದೆ.

ಎಲ್ಲಾ ಔಷಧಿ ವ್ಯಾಪಾರಿಗಳೂ ಪೆಪ್ಸ್‌ನ್ನು ಒಂದು ರೂಪಾಯಿಯಂತೆ ಬಿಕರಿ ಮಾಡುತ್ತಾರೆ.

ಏಜಂಟರು:—

ಮೆಸರ್ಸ್ ದಾಧಾ ಎಂಡ್ ಕೊ., ಪಾರ್ಕ್ ಟೌನ್, ಮದ್ರಾಸು.

ಪೆಪ್ಸ್ ಸೇವಿಸಿ

PEPS

ಕ್ರಿಮಿನಾಶಕ ಶ್ವಾಸನೀಯ ಬಿಲ್ಲೆಗಳು

ವಿದೇಶ

ಹನಾನಿನಲ್ಲಿನ ಕಾದಾಟ—ಚೀನಿಯರ ದಂಗೆ

ಮಿಲೋ ನದ್ಯಿ ತೀರಹ ದಕ್ಷಿಣ ಸಾರ್ಶ್ವದಲ್ಲಿ ಜಪಾನೀಯರ ಮುನ್ನಡೆಯನ್ನು ತಡೆಗಟ್ಟಿ ಚೀನೀಯರು ಆ ನದಿಯ ಉತ್ತರ ಭಾಗದಲ್ಲಿ ಜಪಾನೀಯರ ಮೇಲೆ ಸು ರು ದಾ ಳಿ ಹೂಡಿದ್ದಾರೆ; ಅಲ್ಲದೆ ಹನಾನ್ ಪ್ರಾಂತದಲ್ಲಿ ಜಪಾನೀಯ ನ್ನು ಅಲ್ಲಲ್ಲಿ ಹಿಂದಕ್ಕೆ ಅಟ್ಟುತ್ತಲೂ ಬಂದಿದ್ದಾರೆ. ಮಿಲೋ ನದಿಯ ಬಳಿಯ ೫ ದಿನಗಳ ಕಾಳಗದಲ್ಲಿ ಜಪಾನೀಯರ ೧೦ ಸಾವಿರ ಮಂದಿ ವೀರರು ಮಡಿದೂ, ಗಾಯಗೊಂಡೂ ಇರುವರು. ಅಲ್ಲಿನ ಯುದ್ಧ ಎನ್ನೂ ಸಾಗುತ್ತಲೇ ಇದೆ. ಇತ್ತ ಜಪಾನೀಯರು ಆಕ್ರಮಿಸಿದ ಚೀನದಲ್ಲಿ, ಉತ್ತರ ಹನಾನ್ ಪ್ರಾಂತದಲ್ಲಿ ವಾಂಗ್-ತಂಗ್-ವೀಯ, ಜಪಾನಿನ ಸೃಷ್ಟಿಯ ಪ್ರಭುವಿನ ಸೇನೆಗಳು ದಂಗೆ ಎದ್ದು ಕೆಲವು ಜಪಾನೀ ಆಫೀಸರರನ್ನು ಕೊಲೆ ಮಾಡಿದುದು ನಿಜವೆಂದು ಈಗ ಖಾತರಿ ಯಾಗಿ ತಿಳಿದುಬಂದಿದೆ.

'ಯುದ್ಧದ ಕಿಡಿ ಯಾವ ಮಿಷದಲ್ಲಿಯೂ ಹಾರಬಹುದು!'

ಹಾಗೆಂದು ಸಾರಿದ ಫೈಲ್ಯಾಂಡಿನ ಪ್ರಧಾನರ ಈ ಬ್ರಾಡ್‌ಕಾಸ್ಟಿನ ಎಚ್ಚರಿಕೆಯ ನುಡಿ ಕೇಳಿ ಅಲ್ಲಿನ ಜನರಿಗೆ ಬಹಳ ಆಶ್ಚರ್ಯವಾಗಿದೆ. ಕಾರಣ ಜನಗಳು ಈ ಗಭೀರ ಸಂದೇಶವನ್ನು ಈ ವೇಳೆಯಲ್ಲಿ ನಿರೀಕ್ಷಿಸಿರಲಿಲ್ಲವಂತೆ. ಏಕಾ ಏಕಿ ಕೊಡಲಾದ ಆಕಸ್ಮಿಕ ಎಚ್ಚರಿಕೆಗೆ ಕಾರಣವೇನೆಂಬುದು ಯಾರಿಗೂ ಊಹಿಸಲೂ ಶಕ್ಯವಾಗಿಲ್ಲ!

ಬಲ್ಗೇರಿಯಕ್ಕೆ ನಾಜಿಗಳ ಕೊನೆಯ ಮಾತು!

'ನೀವು ಕೂಡಲೇ ರಷ್ಯದ ವಿರುದ್ಧ ಯುದ್ಧಕ್ಕಿಳಿಯಬೇಕು; ಇಲ್ಲವಾದರೆ ನಮ್ಮ ಇಡೀ ರಾಷ್ಟ್ರವನ್ನೇ ನಾವು ಸಂಪೂರ್ಣವಾಗಿ ವಶಮಾಡಿಕೊಳ್ಳುತ್ತೇವೆ'—ಹೀಗೆಂದು ನಾಜಿಗಳು ಬಲ್ಗೇರಿಯಕ್ಕೆ ಕೊನೆಯ ಮಾತು ಹೇಳಿರುವುದಾಗಿಯೂ ಹಿಟ್ಲರು ತನ್ನ ಭೇಟಿಗೆ ಬರಸ ಬೋರಿಸರನ್ನು ಕರೆದಿರುವನೆಂಬ ವಾರ್ತೆ ಆಧಾರವಿಲ್ಲದುದಾಗಿಯೂ ಒಬ್ಬ ವಾರ್ತಾದಾಯಕನ ವರದಿ. ಆದರೆ ಬಲ್ಗೇರಿಯದ ಅಧಿಕಾರಿಗಳು ಹಿಟ್ಲರ್-ಬೋರಿಸರ ಭೇಟಿಯ ವಿಷಯವನ್ನು ಹೌದೆನ್ನುವುದೂ ಇಲ್ಲ; ಅಲ್ಲವೆನ್ನುವುದೂ ಇಲ್ಲ. ಹೇಗೂ ಬಲ್ಗೇರಿಯದಲ್ಲಿ ಯುದ್ಧಸನ್ನದ್ಧತೆಯ ಕೆಲವು ಲಕ್ಷಣಗಳಾಗಲೇ ಕಂಡುಬರುತ್ತಿವೆ.

ಜಪಾನರ ಮುಂದಿನ ಹೆಜ್ಜೆ

ಈಚಿಗೆ ಕೆಲ ವಾರಗಳಿಂದ ಜಪಾನೀಯರ ಸೇನೆಗಳು—ಸುಮಾರು ೧೦ ಲಕ್ಷ ಮಂದಿ—ಮಂಚಕಾವೊ ಮತ್ತು ಕೊರೆಯದ ಗಡಿಗಳಲ್ಲಿ ಬಂದು ತುಂಬಿಕೊಂಡಿವೆ ಎಂದು ಸುದ್ದಿ. ಜರ್ಮನಿಯ ದಾಳಿ ರಷ್ಯದಲ್ಲಿ ಯಶಸ್ವಿಯಾದರೆ ಆಗ ತಾವು ಸೈಬೀರಿಯದಲ್ಲಿ ಕಾಲೂರಬೇಕೆಂದೇ ಜಪಾನರಲ್ಲಿ ಸೇನಾಸಂಗ್ರಹ ಮಾಡಿದ್ದಾರೆಂದು ಹೇಳಲಾಗಿದೆ. ಆದರೆ ಜರ್ಮನಿಯ ಯುದ್ಧದ ದೆಸೆಯಿಂದ ದೂರದ ಪೂರ್ವದಲ್ಲಿ ರಷ್ಯದ ಬಲಗಳೇನೂ ಕಡಿಮೆಯಾಗಿಲ್ಲವೆಂದು ತಿಳಿದುಬಂದಿದೆ.

ರಷ್ಯದ ನಾನಾ ರಣರಂಗ

ಲೆನಿನ್‌ಗ್ರಾಡಿನ ಹೊರ ಭಾಗದಲ್ಲಿ ಜರ್ಮನರೂ, ರಷ್ಯದವರೂ ಜೀವದ ಹಂಗು ತೊರೆದು ಕಾದಾಡುತ್ತಿದ್ದಾರೆ. ಮಧ್ಯದ ರಣರಂಗದಲ್ಲಿ ಜರ್ಮನರಿಗೆ ಪ್ರಯೋಜನವಾಗಿಲ್ಲ, ರಷ್ಯದವರ ಕೈ ಬಲವಾಗಿದೆ. ಕೀವಿನ ಪೂರ್ವ ಪ್ರದೇಶದಲ್ಲಿ ಘೋರ ಕಾದಾಟ ನಡೆಯುತ್ತಿದ್ದು, ರಷ್ಯದ ಸೇನೆಗಳ ನಿಪಾತಮಾಡುತ್ತಿದ್ದೇವಾಗಿ ಜರ್ಮನರ ಹೇಳಿಕೆ. ರಷ್ಯದ ಸೇನಾಪತಿಗಳು ತಮ್ಮ ಸೇನೆಗಳಲ್ಲಿ ಬಹು ಭಾಗವನ್ನು ಅಲ್ಲಿಂದ ಹಿಂದೆಗೆದಿದ್ದಾರೆ. ರುಮೇನಿಯಾ ಸೇನೆಗಳು ಒಡೆಸದ ಕಡೆ ಮುನ್ನಡೆಯುತ್ತಿವೆ.

ಇನ್ನೊಂದು ಅಮೆರಿಕದ ಹಡಗ ಮುಳುಗಿತು

ಅಮೆರಿಕದ ಇನ್ನೊಂದು ಹಡಗ "ಪಿಂಕ್‌ಸ್ಟಾರ್" ಐಸ್‌ಲ್ಯಾಂಡಿನ ಜಲಧಿಯಲ್ಲಿ ಮುಳುಗಿಸಲ್ಪಟ್ಟಿದೆ. ಹೇಗೆ ಮುಳುಗಿಸಲ್ಪಟ್ಟಿತೆಂಬುದು ತಿಳಿದಿಲ್ಲ.

ಅಟ್ಲಾಂಟಿಕಿನಲ್ಲಿ

ಈ ಸಾಗರದಲ್ಲಿ ಇನ್ನೂ ಅಮೆರಿಕದವರು ಯಾವ ಏಕ್ಸಿಸ್ ರಾಷ್ಟ್ರಗಳ ಹಡಗುಗಳ ಮೇಲೂ ಗುಂಡು ಹಾರಿಸಿಲ್ಲವೆಂದು ತಿಳಿದುಬಂದಿದೆ.

ತಾರುಣ್ಯ
ವನ್ನುಳಿಸಿಕೊಂಡು
ಮನಮುಗ್ಧ
ರಾಗಿರಬಾರದೇಕೆ
ಸೌಂದರ್ಯವು ಚರ್ಮದ ಕಾಂತಿಗಿಂತಲೂ ಆಳವಾದುದಿದೆ. ಆ ಶುಭ್ರ ಕಣ್ಣುಗಳು, ರಮಣೀಯ, ಸ್ವಚ್ಛ ಅಂಗಕಾಂತಿ ಹಾಗು ಉಲ್ಲಾಸ ಮನೋವೃತ್ತಿ, ಇವೆಲ್ಲಾ ಅಂತರಾರೋಗ್ಯದಿಂದ ಉಂಟಾಗುವುವು; ಈ ಅಂತರಾರೋಗ್ಯದ ರಹಸ್ಯ ಬೈಲ್ ಬೀನ್ಸ್‌ಗಳಲ್ಲಿದೆ.
ಇದುಕಾರಣ ರಮಣೀಯ, ಆಕರ್ಷಕ ದೇಹಾಕೃತಿ, ಮನಮುಗ್ಧ ಅಂಗಕಾಂತಿ ಪಡೆಯಬೇಕಾದರೆ ಮತ್ತು ಯಾವಾಗಲೂ ಉಲ್ಲಾಸವಾಗಿ, ಆರೋಗ್ಯವಾಗಿರಬೇಕಾದರೆ, ಪ್ರತಿ ರಾತ್ರಿಯೂ ಎರಡು ಬೈಲ್ ಬೀನ್ಸ್ ಸೇವಿಸುವ ಅಮೂಲ್ಯ ಸೂತ್ರವನ್ನನುಸರಿಸಲು ಮರೆಯದಿರಿ.
ಪ್ರತಿದಿನವೂ 1,000,000ಕ್ಕೆ ಮೇಲ್ಪಟ್ಟು ಬೈಲ್ ಬೀನ್ಸ್ ಮಾರಲ್ಪಡುತ್ತವೆ. ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸ್‌ಗಳನ್ನು ಸ್ಟಾಕ್ ಮಾಡುತ್ತಾರೆ. ಬಾಟ್ಲಿ ಒಂದರ ಬೆಲೆ ರೂಪ್ಯಾ ಒಂದು. ಉದಾರ ಉಚಿತ ನಮೂನೆಗಾಗಿ ಬರಕೊಳ್ಳಿ. ಅಂಚೆ ವೆಚ್ಚಕ್ಕಾಗಿ ಒಂದಾಣೆ ಚೀಟಿ ಕಳಿಸಿರಿ. ಏಜಂಟರು: ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ., ಮದ್ರಾಸು.
ಬೈಲ್ ಬೀನ್ಸ್ ಈ ತೆರ ಮಾಡುತ್ತವೆ: ಬೈಲ್ ಬೀನ್ಸ್ ಶುದ್ಧ ಸಸ್ಯ ಸಾರಗಳಿಂದ ತಯಾರಿಸಿದ್ದಾಗಿವೆ. ಅದುಕಾರಣ ಪೂರ್ಣ ವಿಶ್ವಾಸದಿಂದ ಇವನ್ನು ಕ್ರಮವಾಗಿ ಪ್ರತಿ ರಾತ್ರಿಯಲ್ಲೂ ಸೇವಿಸಬಹುದು. ಇವು ಅಂಗರಚನೆಯನ್ನು ಚೇತನಗೊಳಿಸಿ, ರಕ್ತವನ್ನು ಶುದ್ಧ ಮಾಡಿ, ಕೊಬ್ಬುಂಟಾಗುವ ಮಲಪದಾರ್ಥವನ್ನು ದಿನವೂ ಹೊರಗೆಡಹುವುವು; ಹಾಗೆ, ನಿಮ್ಮ ಅಂತರಾರೋಗ್ಯವು ನಿಶ್ಚಿತಗೊಂಡು ನೀವು ಮನೋಹರ ಮತ್ತು ಚಿತ್ತಾಕರ್ಷಕವಾಗಿ ಸಪುರ ಆಗುವಿರಿ.
THE WORLD'S GREATEST SPECIFIC
BILE BEAN
THE GENUINE
BILE BEANS
for BILIOUSNESS
BILE BEANS
ಬೈಲ್ ಬೀನ್ಸ್ ನಿಮ್ಮ ಪ್ರಾಯಕ್ಕೆ ಹಲವು ವರ್ಷ ಕಡಿಮೆಕಾಣುವಂತೆ ಮಾಡುವುವು

ಎರಡು ಇಟೆಲಿ ಹಡಗುಗಳು

ಬ್ರಿಟಿಷ್ ಸಬ್‌ಮೆರೈನುಗಳು ಲೀಬಿಯಕ್ಕೆ ದಂಡು ಸಾಮಗ್ರಿಗಳನ್ನು ಸಾಗಿಸುತ್ತಿದ್ದ ಎರಡು ಇಟೆಲಿ ಹಡಗುಗಳನ್ನು ನಾಶಮಾಡಿ ಮೂರನೆಯ ಹಡಗನ್ನು ಗಾಸಿಗೊಳಿಸಿವೆ.

ಮದ್ದುಗುಂಡಿನ ಕಾರ್ಖಾನೆಯಲ್ಲಿ ಸಿಡಿತ

ದಕ್ಷಿಣ ಬೊಹೀಮಿಯದ ಪ್ರಾಮುಖ್ಯವಾದ ಒಂದು ಯುದ್ಧಸಾಮಗ್ರಿಯ ಕಾರ್ಖಾನೆಯಲ್ಲಿ ಸಿಡಿತವುಂಟಾಗಿ ಹಲವು ಮಂದಿ ಸತ್ತರು. ಕಾರ್ಖಾನೆ ಧ್ವಂಸವಾಗಿದೆ.

ಕೀವಿನ ಪತನದ ಪರಿಣಾಮ

ಕೀವಿನ ಪತನದಿಂದ ಇಡೀ ರಷ್ಯದ ರಾಷ್ಟ್ರಕ್ಕೂ, ಸೇನೆಗಳಿಗೂ ಬಾಧಕವಿದೆ; ಇಡೀ ಡ್ನಾನ್ ಕ್ಷೇತ್ರಕ್ಕೆ—ಇದು ರಷ್ಯದ ದೊಡ್ಡ ಯುದ್ಧಸಾಮಗ್ರಿಗಳ ತಯಾರಿಯ ಒಂದು ಕ್ಷೇತ್ರ—ಇದರಿಂದ ಅಪಾಯವಿದೆ; ಹಿಟ್ಲರಿನ ಒಂದು ಆಶೆ ಈಗ ಪೂರೈಸಿದಂತಾಗಿ ಮುಂದೆ ಫಲಸಮೃದ್ಧವಾದ ಉಕ್ರೈನೂ ಹಿಟ್ಲರನ ಕೈಗೆ ಬೀಳಬಹುದೆಂದು ಬ್ರಿಟನಿನ ಪತ್ರಿಕೆಗಳು ಅನ್ನುತ್ತಿವೆ.

ಮೈಸೂರು ಪ್ರಜಾಪ್ರತಿನಿಧಿ ಸಭಾಧಿವೇಶನ

ಮೈಸೂರು ಪ್ರಜಾಪ್ರತಿನಿಧಿ (ದಸರಾ) ಸಭಾಧಿವೇಶನವು ಇದೇ ಅಕ್ಟೋಬರ ತಾ. ೧೧ರಿಂದ ಆರಂಭವಾಗಲಿದೆ. ಅಧಿವೇಶನ ಕಾಲದಲ್ಲಿ ಸುಮಾರು ೨೨ ಆಫಿಶಿಯಲ್ ಬಿಲ್ಲುಗಳೂ, ೧ ನಾನ್ ಆಫೀಶಿಯಲ್ ಬಿಲ್ಲೂ ಅಲ್ಲದೆ ಸುಮಾರು ೧೬೬ ನಿರ್ಣಯಗಳೂ, ೨೦೫ ಅರಿಕೆಗಳೂ ಮುಂದೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಮಸೂದೆಗಳಲ್ಲಿ ಮೋಟರ್ ವಾಹನಗಳದು, ಜೈಲ್ ಸುಧಾರಣೆಗಳೆದು, ಹುಡುಗರ ಶ್ರಮಜೀವನಕ್ಕೆ ಸಂಬಂಧಿಸಿದುದೂ ಕಲವು. ಅರಿಕೆಗಳಲ್ಲಿ ಕಂದಾಯವನ್ನು ತಗ್ಗಿಸುವ, ಶಾಲೆಗಳನ್ನು ಹೆಚ್ಚಿಸುವ, ದೆವಿನ್ಯೂ ಆಫೀಸುಗಳಲ್ಲಿ ಬೇಗನೆ ಅರ್ಜಿಗಳನ್ನು ಏಲೆ ಮಾಡುವ, ಋಣ ಪರಿಹಾರದ ಕುರಿತಾದ ಸಮಿತಿಗಳನ್ನು ಸ್ಥಾಪಿಸುವ ಹಲವು ವಿಷಯಗಳಿವೆ.

ನಿಮ್ಮ ಕೂದಲನ್ನು ರಕ್ಷಿಸಿ ಕೊಳ್ಳಿ
ನೀವು ತಲೆ ಬರುಡೆಯನ್ನು ಒಣಗಿಸತಕ್ಕ ಪದಾರ್ಥಗಳಿಂದ ಮಾಡಿದ ಅಪಾಯ ಕರವಾದ ಕೇಶತೈಲಗಳನ್ನು ತಿಳಿಯದೆ ಉಪಯೋಗಿಸಿ ತಲೆಯ ಕೂದಲನ್ನು ಹಾಳು ಮಾಡಿಕೊಳ್ಳುತ್ತಿರುವಿರಾ?
''ವ್ಯಾಸಿಲೈನ್'' ಪೊಮೇಡನ್ನು ನಿತ್ಯವೂ ತಲೆ ಬಾಚುವುದಕ್ಕೆ ಉಪಯೋಗಿಸುವುದರಿಂದ ಆರೋಗ್ಯ ರಕ್ಷಣೆಯೂ, ತಲೆ ಬುರುಡೆ ಮತ್ತು ಕೂದಲು ಮೃದುವಾಗಿ ಅದರ ಸೌಂದರ್ಯವೂ ಹೆಚ್ಚುವುದು. ಈದಿನವೇ ಒಂದು ಸೀಸೆ ''ವ್ಯಾಸಿಲೈನ್'' ಪೊಮೇಡನ್ನು ಕೊಂಡುಕೊಳ್ಳಿ.
ವ್ಯಾಸಿಲೈನ್ ಪೊಮೇಡು
12-C

ಸ್ವಂತ ಅನುಭವದಿಂದಲೇ ನಾನು ಮಾತನಾಡುತ್ತಿದ್ದೇನೆ

ಆರೋಗ್ಯತೆಯನ್ನೂ ಹಣವನ್ನೂ ನಷ್ಟಮಾಡಿಕೊಂಡೇ ನಾನು ಕಲಿತಿದ್ದೇನೆ.

ನಿಮ್ಮ ಆಶ್ಚರ್ಯಕರವಾದ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲಟ್ಸ್‌ಗಳಿಗಾಗಿ ನಿಮಗೆ ವಂದನೆಗಳು.

IRVING'S
Yeast-Vite
TONIC TABLETS

ಮಹನೀಯರೇ, ನಿಮಗೆ ದೊರೆಕಿರುವ ನೂರಾರು ವಂದನೆಗಳೊಡನೆ ನನ್ನ ವಂದನೆಯನ್ನೂ ಸಲ್ಲಿಸಲು ನಾನು ಬಯಸುತ್ತೇನೆ.

ಆರು ವರ್ಷಗಳ ಹಿಂದೆ ನನಗೆ ಕರೊದೌರ್ಬಲ್ಯವು ಪ್ರಾರಂಭವಾಯಿತು. ಇದರಿಂದ ಸ್ವಲ್ಪ ಸ್ವಲ್ಪವಾಗಿ ನನ್ನ ಜೀರ್ಣಶಕ್ತಿಯೂ ಹಾಳಾಯಿತು. ಚಿಕಿತ್ಸೆಗಾಗಿ ಎಷ್ಟೋ ಹಣ ಖರ್ಚುಮಾಡಿ ಅನೇಕ ವಿಧವಾದ ಔಷಧಗಳನ್ನು ಸೇವಿಸಿದೆನು. ಯಾವುದರಿಂದಲೂ ಸರಿಯಾಗಿ ಗುಣವಾಗಲಿಲ್ಲ. ಹನ್ನೆರಡು ತಿಂಗಳುಗಳಿಗೆ ಮುಂಚೆ ನಿಮ್ಮ ಯೀಸ್ಟ್-ವೈಟನ್ನು ತೆಗೆದುಕೊಳ್ಳಲು ನಿರ್ಧರಿಸಿದೆನು. ಹಾಗೆ ಮಾಡಿದ್ದಕ್ಕಾಗಿ ನಾನು ಬಹಳ ಸಂತೋಷಿಸುತ್ತೇನೆ. ಯಿಸ್ಟ್-ವೈಟನ್ನು ಸೇವಿಸಲು ಪ್ರಾರಂಭಿಸಿದ ಮೊದಲುಗೊಂಡು ನಾನು ಬೇರೆ ಮನುಷ್ಯನಾಗಿದ್ದೇನೆ. ನರೊದೌರ್ಬಲ್ಯವೂ ಉದರಸಂಭಂದವಾದ ತೊಂದರೆಗಳೂ ಹಾರಿಹೋದುವು.

ಹೋದವಾರದಲ್ಲಿ ನನಗೆ ಪ್ರಮಾದವಾದ ಅಜೀರ್ಣವೂ ಹೃದಯದಲ್ಲಿ ತಾಪವೂ, ಇವುಗಳೊಡನೆ ನರೊದೌರ್ಬಲ್ಯವೂ, ಉಂಟಾದುವು. ತಕ್ಷಣವೇ ಒಂದು ಸೀಸೆ ಯೀಸ್ಟ್-ವೈಟ್‌ನ್ನು ತರಿಸಿ ತೆಗೆದುಕೊಳ್ಳುವುದಕ್ಕೆ ಪ್ರಾರಂಭಿಸಿದೆನು. ಮೋದಲಿನ "ಡೋಜಿ"ನಿಂದಲೇ ವ್ಯಾಧಿಯು ಗುಣಮುಖಕ್ಕೆ ತಿರುಗಿ ಸೀಸೆಯು ಮುಗಿಯುವಾಗ ನನಗೆ ಸಂಪೂರ್ಣವಾಗಿ ಗುಣವಾಯಿತು. ನನ್ನನ್ನು ನಂಬಿ ಸ್ವಂತ ಅನುಭವದಿಂದಲೇ ನಾನು ಹೇಳುತ್ತಿದ್ದೇನೆ ಮತ್ತು ಆರೋಗ್ಯತೆಯನ್ನೂ ನಷ್ಟಮಾಡಿಕೊಂಡೇ ಇದನ್ನು ನಾನು ತಿಳಿದು ಕೊಂಡಿದ್ದೇನೆ.

ಪುನಃ ನಿಮ್ಮ ಯೀಸ್ಟ್ ವೈಟ್‌ಗಾಗಿ ವಂದನೆಗಳು.

ಇತಿ, ನಿಮ್ಮ ಡಬ್ಲ್ಯೂ. ಸಿ.

ನಾನು ಎಷ್ಟು ಗಟ್ಟಿಯಾಗಿಯೂ ಮತ್ತು ಚೆನ್ನಾಗಿಯೂ ಇದ್ದೇನಂಬುದನ್ನು ನನ್ನ ಸ್ನೇಹಿತರು ಹೇಳುತ್ತಾರೆ. ಮಹನೀಯರೇ,

ನಿಮ್ಮ ಯೀಸ್ಟ್-ವೈಟ್‌ನಿಂದ ನನಗೆ ಎಷ್ಟರ ಮಟ್ಟಿಗೆ ದೇಹಾರೋಗ್ಯವುಂಟಾಗಿದೆಯೆಂಬುದನ್ನು ನೀವು ತಿಳಿದು ಸಂತೋಷಭರಿತರಾಗುವಿರಿ.

ನನಗೆ ಕಾಹಿಲೆಯ ತರುವಾಯ ಬಹಳ ದಿನದ ವರೆಗೆ ನರಗಳ ವ್ಯಾಧಿಯಿಂದ ಕಷ್ಟಪಟ್ಟದ್ದಲ್ಲದೆ ಬಹಳ ಏಳಲಿ ಬೆಂಡಾಗಿದ್ದೆನು. ಮುತುವರ್ಜಿಯೂ ಕಡಮೆಯಾಗಿತ್ತು. ಯಾವ ಕೆಲಸವೂ ಸಾಗುತ್ತಿರಲಿಲ್ಲ.

ನಾನು ಅನೇಕ ಔಷಧಗಳನ್ನು ತೆಗೆದುಕೊಂಡೆನು. ಆದರೆ ಯಾವುದರಿಂದಲೂ ಗುಣವಾಗದಿದ್ದರಿಂದ ಯೀಸ್ಟ್ ವೈಟ್‌ನ್ನು ಸೇವಿಸುವುದಕ್ಕೆ ನಿರ್ಧರಿಸಿದೆನು. ಅದನ್ನು ತೆಗೆದುಕೊಂಡ ಒಂದು ತಿಂಗಳೊಳಗೆ ಹೊಸ ಮನುಷ್ಯನಾಗಿದ್ದೇನೆ.

ಈಗ ನನ್ನ ಸ್ನೇಹಿತರು, ನಾನು ಮೊದಲಿನಂತೆ ಎಷ್ಟು ಗಟ್ಟಿಯಾಗಿಯೂ ಚೆನ್ನಾಗಿಯೂ ಇದ್ದೇನೆಂಬುದನ್ನು ಹೇಳುತ್ತಾರೆ. ಅವರು ಹೇಳುವುದು ಸರಿಯೆಂದು ತೋರುತ್ತದೆ, ಯಾಕೆಂದರೆ ಆದು ನನ್ನ ಮನಸ್ಸಿಗೇ ತಿಳಿಯುತ್ತದೆ.

ಈಗ ನಾನು ಯೀಸ್ಟ್-ವೈಟ್ ಇಲ್ಲದೆ ಇರಲಾರೆನು. ನಿಮಗೆ ಜಯವಾಗಲೆಂದು ಕೋರುತ್ತೇನೆ.

ಇತಿ ನಿಮ್ಮನ್ನೇ ನಂಬಿರುವ, ಬಿ. ಬಿ.

ಇದರ ರಹಸ್ಯ

ಯೀಸ್ಟ್-ವೈಟ್‌ನ ಅಪಾರ ಶಕ್ತಿಯ ರಹಸ್ಯವೇನೆಂದರೆ ಅದು ವೈಟಾಮಿನ್ 'ಬಿ' ತುಂಬಿರುವ ಸ್ವಚ್ಛವಾದ ಔಷಧಯುಕ್ತ ಯೀಸ್ಟ್ ಮತ್ತು ಇತರ ಅಮೂಲ್ಯ ಶಕ್ತಿವರ್ಧಕ ಔಷಧಗಳು ಪ್ರಾಮುಖ್ಯ ವೈದ್ಯರು ಹೇಳಿದಂತೆ ಶಾಸ್ತ್ರೀಯರೀತಿಯಲ್ಲಿ ಬಹಳ ಜಾಗರೂಕತೆಯಿಂದ ಬೆರಸಲ್ಪಟ್ಟು ತಯಾರಾಗಿದೆ. ಯೀಸ್ಟ್-ವೈಟ್ ಅತಿತೀವ್ರವಾಗಿ ಫಲಿಸುವಶಕ್ತಿವರ್ಧಕ ಔಷಧ

ಗುಣವಿಲ್ಲವೋ-ದುಡ್ಡು ಬೇಡ

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ನಮ್ಮ "ಗುಣವಿಲ್ಲವೋ-ದುಡ್ಡು ಬೇಡ"ಯೆನ್ನುವ ಯೋಜನೆಯನ್ನು ಯಾವಾಗಲಾದರೂ ಪರೀಕ್ಷಿಸಿದ್ದೀರಾ? ನೀವು ಬಳಲಿ ಬೆಂಡಾಗಿದ್ದರೂ, ತಲೆನೋವಿನಿಂದ ನರಳುತ್ತಿದ್ದರೂ, ವಾತಗ್ರಸ್ತರಾಗಿದ್ದರೂ, ಅಥವಾ ಯಾವ ಕಾರಣದಿಂದಲಾದರೂ ಸರಿಯೇ ನಿರುತ್ಸಾಹಿಗಳಾಗಿದ್ದರೂ, ಔಷಧ ವ್ಯಾಪಾರಿಯಿಂದಲೋ ಅಥವಾ ಸ್ಟೋರಿನಿಂದಲೋ ಒಂದು ತೀಸೆ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲಟ್‌ಗಳನ್ನು ತರಿಸಿಟ್ಟುಕೊಳ್ಳಿ. ಕ್ಷಿಪ್ರರೀತಿಯಲ್ಲಿ ಸೇವಿಸಿರಿ. ನೀವು ಪೂರ್ಣ ತೃಪ್ತಿ ಹೊಂದದಿದ್ದರೆ ಖಾಲೀ ಪ್ಯಾಕೀಟನ್ನು "ಗ್ಯಾರೆಂಟಿ ಸೀಲ್"ನೊಡನೆ ನಮಗೆ ಕಳುಹಿಸಿ. ನಿಮ್ಮ ಹಣವು ನಿಮಗೆ ಪೂರಾ ವಾಪಾಸುಮಾಡಲ್ಪಡುವುದು. ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಮತ್ತು ಸ್ಟೋರ್‌ಗಳಲ್ಲಿಯೂ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲಟ್‌ಗಳು ದೊರೆವುವು.

ಸೋಲ್ ಮ್ಯಾನುಫಾಕ್ಚರರ್ಸ್:
ಇರ್ವಿಂಗ್ಸ್ ಯೀಸ್ಟ್-ವೈಟ್ ಲಿಮಿಟೆಡ್,
ವಾಟ್‌ಫರ್ಡ್, ಇಂಗ್ಲೆಂಡ್.

To serve you —
— Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.
ESTD: 1906.

XXIII] ಮಂಗಳೂರು, ತಾರೀಕು ೨೬—೯—೧೯೪೧ [೫೨
೧೮೬೩ ವೃಷ ಸಂವತ್ಸರದ ಆಶ್ವೀಜ ಶು ೬ ಶುಕ್ರವಾರ

ನಾಡದೇವಿ—ನುಡಿದೇವಿಯರ ನವರಾತ್ರಿ

ಭಾರತದ ಆದ್ಯಂತದಲ್ಲಿಯೂ ನವರಾತ್ರಿ ಮಹೋತ್ಸವ. ಕರ್ಣಾಟದಲ್ಲಿ ಎಲ್ಲೆಲ್ಲಿಯೂ, ಮುಖ್ಯವಾಗಿ ಮೈಸೂರಲ್ಲಿ, ಈ ದೊಡ್ಡ ಹಬ್ಬವು ದುರ್ಗಾ ಪೂಜೆ, ಶಾರದಾ ಪೂಜೆ, ಮೆರವಣಿಗೆ, ಸಂತರ್ಪಣೆ, ಪಾರಾಯಣ, ಅರ್ಚನೆ ಮೊದಲಾದ ವೈಭವಯುಕ್ತವಾದ ಕಾರ್ಯಕ್ರಮಗಳಿಂದ, ಆನಂದೋತ್ಸಾಹಗಳಿಂದ ನಲಿದಾಡತೊಡಗಿದೆ. ಇವೆಲ್ಲವೂ ಶಾಸ್ತ್ರೀಯ ರೀತಿಯಲ್ಲಿ, ಪುರಾತನ ಪದ್ಧತಿಯಂತೆ ಈ ಸಲವೂ ನಡೆದು ಸಾಂಗುವಾಗುವಲ್ಲಿ ಸಂದೇಹವಿಲ್ಲ.

ಈಚೆಗೆ, ನಮ್ಮ ನಾಡ ಹಬ್ಬವು, ರಾಷ್ಟ್ರೀಯ ಸ್ವರೂಪವನ್ನು ತಳೆಯುತ್ತ ಜನಶಕ್ತಿ, ವಿದ್ಯಾಶಕ್ತಿಯ ಸಂಗ್ರಹಕ್ಕಾಗಿ ಯತ್ನಿಸುತ್ತ ಬರುತ್ತಿರುವುದು ಶುಭ ಚಿನ್ಹೆಯಾಗಿದೆ. ರಾಷ್ಟ್ರವು ಜಾಗ್ರತಿಯನ್ನು ತಳೆದು, ಅದರೊಂದಿಗೆ ನಮ್ಮ ಕರ್ಣಾಟಕವೂ ತನ್ನ ಯಾವತ್ತು ಶಕ್ತಿಯೂ ಈ ನಾಡ ಹಬ್ಬದ ಕಾಲದಲ್ಲಿ, ಸಂಘಟನೆಯಾಗುವಂತೆ ಪೇಚಾಡುವುದಿದು ಕಾಲೋಚಿತವೆನ್ನಬೇಕಾಗಿದೆ. ಈಗ ನಮ್ಮಲ್ಲಿ ಮನೆ ಮಠಗಳಲ್ಲಿ, ವಿದ್ಯಾ ಸಂಸ್ಥೆಗಳಲ್ಲಿ ಶಕ್ತಿ—ಸರಸ್ವತಿಯರ ಧಾರ್ಮಿಕ ಪೂಜೆಯಷ್ಟೇ ನಡೆಯುವುದಲ್ಲ; ನಾಡಿನ, ನುಡಿಯ ಸಂಸ್ಕೃತಿಗಳ ಶಕ್ತಿ ಸಂಘಟನೆಗಾಗಿ, ಎಲ್ಲೆಲ್ಲಿಯೂ ಚಳವಳವು ನಡೆಯುತ್ತಿದೆ. ಆ ಉದ್ದೇಶದ ಪೂರೈಕೆಗಾಗಿ, ಈಗ ನಾಡ ಹಬ್ಬದ ಹೆಸರಲ್ಲಿ, ಪ್ರಚಂಡ ಸಾರ್ವಜನಿಕ ಸಭೆ; ವಿದ್ಯಾವಂತರ ನಾನಾ ವಿಷಯಗಳ ಕುರಿತಾದ ಉಜ್ವಲ ಭಾಷಣಗಳು. ಇವೆಲ್ಲವೂ ಕನ್ನಡ ನಾಡಿನ ಜನತೆಯ ಶಕ್ತಿ ಎಲ್ಲವೂ ಒಂದೆಡೆ ಕಲೆಯುವುದಕ್ಕಾಗಿ; ಕರ್ಣಾಟಕ ರಾಷ್ಟ್ರದ, ನುಡಿಯ ಏಕೀಕರಣಕ್ಕಾಗಿ. ಅಂದ ಮೇಲೆ, ಈ ಶಕ್ತಿ ಆರಾಧನೆಯ ಸುಮುಹೂರ್ತವನ್ನು ಸದುಪಯೋಗಪಡಿಸದ, ಈ ರಾಷ್ಟ್ರೀಯೋತ್ಸವದ ನೀತಿ ಪಾಠದಿಂದ ಬುದ್ಧಿ ಕಲಿಯದ ಆ ಕನ್ನಡಿಗನ ಬಾಳದು ಹಾಳು!

ಪಾಶ್ಚಾತ್ಯರಾಷ್ಟ್ರಗಳು ತಮ್ಮ ಸಂಘಟನೆಯನ್ನು ಏಕೀಕರಣ ಕಾರ್ಯವನ್ನು, ಪ್ರಚಂಡ ರಾಜಕೀಯ ಆಂದೋಲನದ ಮೂಲಕ, ಭೀಕರ ಹಿಂಸೆ, ವಧೆ ರಕ್ತಪಾತಗಳ ಮೂಲಕ ಮಾಡಿಕೊಂಡಿವೆ. ಇದರ ದುರಂತ ಪರಿಣಾಮವೇನೆಂಬುದಕ್ಕೆ ಇಂದಿನ ಘೋರ ಯುದ್ಧವೇ ಒಂದು ಸಾಕ್ಷಿ. ಭಾರತೀಯರಿಗೆ, ಆ ಮಾರ್ಗವು ಸುತರಾಂ ಒಪ್ಪುವುದಿಲ್ಲ. ಸತ್ಪುರುಷರೂ, ಸಾಧುಸಜ್ಜನರೂ, ರಾಜನಿಷ್ಠೆಯುಳ್ಳವರೂ ಆದ ನಮ್ಮವರಿಗೆ, ಆ ಹಿಂಸಾ ಮಾರ್ಗವು ಅಯೋಗ್ಯವೆಂದೇ, ಮಹಾತ್ಮರೂ ತಮ್ಮದೇ ಆದ ಆ ಅಹಿಂಸಾ ಮಾರ್ಗದಲ್ಲೇ ನಮ್ಮನ್ನು ಜಾಗರೂಕತೆಯಿಂದ ಮುನ್ನಡೆಯಿಸುತ್ತಿದ್ದಾರೆ. ಅದರಂತೆ ನಮ್ಮ ನಾಡ ಹಬ್ಬದ ಪ್ರತಿಯೊಂದು ಆಚರಣೆಯೂ ಶಾಂತವಾಗಿ ಸಾಗಬೇಕಾಗಿದೆ. ಕನ್ನಡಿಗರಲ್ಲಿ ಒಗ್ಗಟ್ಟನ್ನು ಉಂಟು ಮಾಡಲು, ಅವರನ್ನು ಏಕೀಕರಿಸಲು, ಕರ್ಣಾಟಕ ಜನತೆಯ ಶಕ್ತಿಯನ್ನು ಒಂದುಗೂಡಿಸಲು ಈ ಶಾಂತ ಮಾರ್ಗಕ್ಕೆ ಹೆಚ್ಚು ಸಮಯ ಹಿಡಿಯುವುದೆಂಬುದೇನೋ ನಿಜ. ಆದರೆ, ಹಿಂಸಾ ಮೂಲಕವಾಗಿ ಉಂಟಾದ, ಉಂಟಾಗುವ ಯಾವುದೊಂದು ಪರಿಣಾಮವಾದರೂ "ನೀರ ಮೇಲಿನ ಗುಳ್ಳೆ"ಯಂತೆ ಅಶಾಶ್ವತವೆಂಬುದನ್ನು ನಾವು ನೆನಪಿಗೆ ತಂದುಕೊಂಡರೆ, ಭಾರತೀಯರ ಇಂದಿನ ಅಹಿಂಸಾ ಮಾರ್ಗವೆಷ್ಟು ಸುರಕ್ಷಿತ, ಪ್ರಶಸ್ತವೆಂಬುದು ತಿಳಿಯದಿರದು.

ನಮ್ಮ ನಾಡ ಹಬ್ಬವು ಚಿರಕಾಲವೂ ಕನ್ನಡ ನಾಡಿನಲ್ಲಿ ಇತೋಪ್ಯತಿಶಯವಾಗಿ ಬೆಳಗಲಿ! ರಾಷ್ಟ್ರೀಯ ಹಕ್ಕು ಬಾಧ್ಯತೆಗಳನ್ನು ಸಂಪಾದಿಸಬೇಕೆಂಬ ನಮ್ಮ ಆತ್ಮದ ಕೂಗು, ನಮ್ಮ ರಾಷ್ಟ್ರದ, ನುಡಿಯ ಉದ್ಧಾರವಾಗಲೇ ಬೇಕೆಂದು ಎಚ್ಚರಿಸುತ್ತಿರುವ, ಅಬ್ಬರಿಸುತ್ತಿರುವ ಆ ನಮ್ಮ ಅಂತರಂಗದ ಧ್ವನಿ ಸದಾಸರ್ವದಾ ನಮ್ಮ ಕಿವಿಗಳಲ್ಲಿ ಮೊಳಗಲಿ!! ಹಾಗಾಗುವಂತೆ, ನಮ್ಮ ನಾಡ ಹಬ್ಬದ ಕಾರ್ಯಕರ್ತರೂ ಭಾಷಣ ಕರ್ತರೂ ಶಕ್ತಿ ಮೀರಿ ಪ್ರಯತ್ನಿಸಿ, ತನ್ಮೂಲಕ ಧಾರ್ಮಿಕ ಹಬ್ಬದೊಡನೆ, ರಾಷ್ಟ್ರೀಯ ಹಬ್ಬವೂ ಏಕೀಕರಿಸುವಂತೆ, ಧರ್ಮ ರಾಷ್ಟ್ರಗಳ ಏಕೀಕರಣ ಶಕ್ತಿ, ಕಲಾ-ಸಂಸ್ಕೃತಿ-ನಾಗರಿಕತೆಯ ನವಸ್ಫೂರ್ತಿ ಪ್ರಬಲಿಸುವಂತೆ ಏರ್ಪಡಿಸಿದ ಈ ಪುಣ್ಯ ಕೀರ್ತಿ ಅವರು ಗಳಿಸಲಿ!

ಅಲ್ಲಹಾಬಾದ ವಿಶ್ವವಿದ್ಯಾನಿಲಯದ ಸಂಗೀತ ಸಮ್ಮೇಳನ

ಈ ಸಮ್ಮೇಳನ ಅಕ್ಟೋಬರ ತಾ. ೧೯ರಿಂದ ೨೨ರ ವರೆಗೆ ಜರುಗಲಿದೆ. ಬಡೋದೆಯ ಉಸ್ತಾದ್ ಫೆಯಜ್ ಖಾನ್ ಮೊದಲಾದ ಪ್ರಸಿದ್ಧ ಗಾಯಕರು ಇಂಡಿಯದ ನಾನಾ ಭಾಗಗಳಿಂದ ಬಂದು ಸೇರಲಿದ್ದಾರೆ. ದಕ್ಷಿಣ ಹಿಂದುಸ್ಥಾನದಿಂದ ಒಬ್ಬ ಹೆಸರಾದ ವೈಣಿಕ ಶಿಖಾಮಣಿಗಳನ್ನೋ, ಫಿಡ್ಲ್ ವಿದ್ವಾಂಸರನ್ನೋ ಕರೆಯಿಸಿಕೊಳ್ಳುವ ಏರ್ಪಾಡಾಗಿದೆ.

ಜಗತ್ತಿನ ವಿಜ್ಞಾನ ಪರಿಷತ್ತು

ಈ ಪರಿಷತ್ತು ಇಂದು ಲಂಡನಿನಲ್ಲಿ ಜರುಗಲಿದೆ. ಕಾನ್ಫರೆನ್ಸಿನಲ್ಲಿ ಪ್ರೊಫೆಸರ್ ಇನ್‌ಸ್ಟೀನ್‌ರವರು "ಎಡ್ರೆಸ್" ಒಪ್ಪಿಸುವರು. ಈ ಸಭೆಗೆ ಇಂಡಿಯದಿಂದ ಯಾರು ಹೋಗಿರುವರೆಂದು ತಿಳಿಯದು. ಭೆಯ ಉದ್ದೇಶ ವಿಜ್ಞಾನದಿಂದ ಧ್ವಂಸಕಾರ್ಯವಲ್ಲ; ನಿರ್ಮಾಣ ವೊಂದೇ ಎಂಬುದು. ಆದರೆ ಈಗಿನ ಕಾಲದಲ್ಲಿ ವಿಜ್ಞಾನವು ಧ್ವಂಸಕಾರ್ಯಕ್ಕಾಗಿಯೇ ದುರುಪಯೋಗಿಸಿರುವುದು ಹೆಚ್ಚೆಂದು ಕಂಡು ಬಂದಿದೆ. ವಿಜ್ಞಾನವು ಮಾನವ ವರ್ಗದ ಉನ್ನತಿ, ಸುಖಾಭಿವೃದ್ಧಿಗಾಗಿ ಪ್ರಯೋಗವಾಗುವದರ ಬದಲು, ಆದರ ಪರಿಣಾಮ ವಿನಾಶಕಾರವಾಗಿದೆ. ಆದುದರಿಂದ ಜಗತ್ತು, ಮಾನವ ವರ್ಗಕ್ಕೆ ವಿಜ್ಞಾನವು ನಿಜವಾದ ಹಿತವನ್ನು ಕಲ್ಪಿಸುವ ಉಪಕಾರಿಯಾಗಿದೆಯೇ ಅಥವಾ ನಾಶಧ್ವಂಸಗಳ ತವರ್ಮನೆಯಾಗಿದೆಯೇ ಎಂದು ಚಿಂತಿಸತೊಡಗಿದೆ. ವಸ್ತುತಃ ದೇವರ ಸ್ಥಾನದಲ್ಲಿ ವಿಜ್ಞಾನ ಬಂದು ಕುಳಿತು, ಇದು ಪ್ರಚಲಿತ ಧ್ವಂಸ ಪ್ರಪಂಚವನ್ನು ನಿರ್ಮಿಸಿದುದೇನು ಸುಳ್ಳೆನ್ನಲಾದೀತೇ?

ಹಿಂದೂದೇಶ

ಡಾ। ಗಿದ್ವಾನಿಯವರ ದಂಡನೆ ಕಡಿಮೆಯಾಯಿತು

ಸಿಂಧ್ ಪ್ರಾಂತದ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಡಾ। ಛೋಟೇ ರಾಮ್ ಗಿದ್ವಾನಿ ಎಂ. ಎಲ್. ಏ. ಅವರು ಕಳೆದ ಜನವರಿಯಲ್ಲಿ ಲಾಹೋರಲ್ಲಿ ಕೊಟ್ಟ ಒಂದು ಭಾಷಣದ ಸಂಬಂಧ ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ, (ಇಂಡಿಯಾ ಆಕ್ಟಿನ ಮೇರೆಗೆ) ೧೮ ತಿಂಗಳ ದಂಡನೆಗೂ, ೫೦೦ ರೂಪ್ಯಾ ಜುಲ್ಮಾನೆಗೂ ಗುರಿಯಾಗಿದ್ದರು. ಅನಂತರ ಹೈಕೋರ್ಟ್ ಬಾರಿನ ಸಂಘದವರು ಈ ವಿಷಯದಲ್ಲಿ ಮಾಡಿಕೊಂಡ ಅದೊಂದು ಅರ್ಜಿಯ ಮೇರೆಗೆ ಮಿ। ಜಸ್ಟೀಸ್ ಬೆಕೆಟರು, "ಸಜೆ ಈಗ ಅನುಭವಿಸಿದಷ್ಟೇ ಸಾಕೆಂದೂ, ಜುಲ್ಮಾನೆ ತೆರದಿದ್ದರೆ ಅದನ್ನೂ ತೆರಬೇಕಾಗಿಲ್ಲ"ವೆಂದೂ ವಿಧಿಸಿರುವರು.

ಅಖಂಡ ಚರಕಾಯಜ್ಞ

ಪಾಟ್ನಾದಲ್ಲಿ ತಾ. ೧೪ನೇ ದಿನ ಆರಂಭವಾಗಿ ಮರುದಿನ ಬೆಳಿಗ್ಗೆ ಮುಗಿದ ಅಖಂಡ ಚರಕಾಯಜ್ಞದಲ್ಲಿ ೨೮ ಮಂದಿ ಮಹಿಳೆಯರು ೨೪ ಗಂಟೆಗಳಲ್ಲಿ ಸುಮಾರು ೨೦ಸಾವಿರ ಗಜ ನೂಲು ತಯಾರಿಸಿದರು.

ಅರಾಬಿಕ್ ವಿಶ್ವವಿದ್ಯಾನಿಲಯ

ಸಿಂಧಿನಲ್ಲಿ ಅರಾಬಿಕ್ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸುವ ಯತ್ನ ನಡೆದಿದೆ. ಆಗಲೇ ೪೫ ಮಂದಿಯುಳ್ಳ ಒಂದು ಸೆನೆಟೂ, ೧೫ ಮಂದಿಯ ಒಂದು ಸಿಂಡಿಕೇಟೂ ರಚನೆಯಾಗಿದೆ. ತಾಜಪುರದಲ್ಲಿ (ಹೈದರಾಬಾದು ಜಿಲ್ಲೆ) ವಿಶ್ವವಿದ್ಯಾನಿಲಯವೂ, ಮೌಲ್ವಿಗಳ ತರಬೇತಿಗಾಗಿ ಕರಾಚಿಯಲ್ಲಿ ಈ ನಿಲಯದ ಟ್ರೈನಿಂಗ್ ಕಾಲೇಜೂ ಸ್ಥಾಪನೆಯಾಗಬೇಕಾಗಿದೆ. ಈ ವಿಶ್ವವಿದ್ಯಾನಿಲಯದ ಕಟ್ಟಡದ ಶಂಕುಸ್ಥಾಪನೆಯ ಸಮಾರಂಭ ಅಕ್ಟೋಬರ ತಾ. ೨೬ರಲ್ಲಿ ಜರುಗಲಿದೆ.

ಮಿ। ಸವರ್‌ಕಾರರು

ಅ. ಭಾ. ಹಿಂದೂ ಮಹಾಸಭೆಯ ಅಧ್ಯಕ್ಷರಾದ ಮಿ। ಸವರ್‌ಕಾರರು ಅಮೆರಿಕದ ಮತ್ತು ಬ್ರಿಟನಿನ ಪತ್ರಿಕೆಗಳಿಗೊಂದು ತಂತಿ ಕಳುಹಿಸಿದ್ದಾರೆ. ಅದರಲ್ಲಿ "ಆಂಗ್ಲೋ–ಅಮೆರಿಕದ ಯುದ್ಧೋದ್ದೇಶಗಳ ಕಪಟ ರೂಪದ ಮುಸುಕನ್ನು ಮಿ। ಚರ್ಚಿಲ್ಲರು ತಾವೇ ತಮ್ಮ ಕೈಗಳಿಂದ ಈಚೆಗೆಳೆಯುವಂತೆ ಬಲಾತ್ಕರಿಸಲ್ಪಟ್ಟುದು ಒಳ್ಳೆದೇ ಆಯಿತು. ಬ್ರಿಟಿಷರ ಹೊರತಾದ ಜಗಳಗಂಟ ಕಾರ್ಯಗಳ ವಿರುದ್ಧ ಹೋರಾಡುವುದೂ, ಇಂಡಿಯದ ಹೊರತಾದ ಇತರ ಯಾವತ್ತು ರಾಷ್ಟ್ರಗಳಿಗೂ ಬಿಡುಗಡೆ ಅಥವಾ ಮುಕ್ತಿಯ ಲಾಭ ಕೊಡಿಸುವುದೂ ತಮ್ಮ ಯುದ್ಧೋದ್ದೇಶವೆಂದು ಪ್ರೆಸಿಡೆಂಟ್ ರೂಜ್‌ವೆಲ್ಟರು ಅಭಿಪ್ರಾಯಪಟ್ಟಂತೆ ಮಿ। ಚರ್ಚಿಲ್ಲರೂ ಸೂಚಿಸಿರುವುದೂ ಒಳ್ಳೆದೇ ಆಯಿತು. ಈಗ ಮಿ। ರೂಜ್‌ವೆಲ್ಟರು ಮಿ। ಚರ್ಚಿಲ್ಲರ ಈ ಅರ್ಥ ನಿರೂಪಣೆಯನ್ನು ಅಲ್ಲಗಳೆಯುವಷ್ಟು ಧೈರ್ಯ ತಳೆಯುವರೇ ಅಥವಾ ಅವರು ಮೌನದಿಂದ ಅಥವಾ ಮಾತಿನಿಂದ ಮಿ। ಚರ್ಚಿಲ್ಲರ ತಾಳಕ್ಕೆ ತಕ್ಕ ಮೇಳ ಕಟ್ಟಿ, ಅವರು ಹೇಳಿ ಬರೆಯಿಸಿದುದಕ್ಕೇ "ಅಸ್ತು" "ಎನ್ನುವರೇ?" ಎಂದಿರುವರು. ಕೆಲಕಾಲದ ಹಿಂದೆ ಶ್ರೀ। ಸವರ್‌ಕಾರರು "ಅಟ್ಲಾಂಟಿಕ್ ದಾನ ಶಾಸನ" ಇಂಡಿಯಕ್ಕೂ ಲಗಾವೇ? ಎಂದು ಪ್ರೆಸಿಡೆಂಟ್ ರೂಜ್‌ವೆಲ್ಟರಿಗೆ ತಂತಿ ಬಿಟ್ಟಿದ್ದರು!

ಪ್ರಕಟಣೆ

"ನವರಾತ್ರಿಯ ಸಂಬಂಧ ಬರುವ ಮಂಗಳವಾರ "ಕಂಠೀರವ"ನ ಸಂಚಿಕೆ ಮಾಮೂಲಿನಂತೆ ಹೊರಡುವುದಿಲ್ಲ" —ಮ್ಯಾನೇಜರ.

ವೈಸರಾಯರ ಕೌನ್ಸಿಲಿನಲ್ಲಿ

ವೈಸರಾಯರ ಕೌನ್ಸಿಲಿನಲ್ಲಿ ಸರ್. ಫಿರೋಜ್ ಖಾನ್ ನೂನ್‌ರಿಗೆ ಲೇಬರ ಶಾಖೆಯ ಕಾರ್ಯಗಳನ್ನು ಒಪ್ಪಿಸಲಾಗುವುದೆಂದು ತಿಳಿದು ಬಂದಿದೆ.

ಆಚಾರ್ಯ ನರೇಂದ್ರ ದೇವರ ಬಿಡುಗಡೆ

ಆಗ್ರಾ ಸೆಂಟ್ರಲ್ ಜೈಲಲ್ಲಿ ಸೆಕ್ಯುರಿಟಿ ಕೈದಿಯಾಗಿದ್ದ, ಕಾಂಗ್ರೆಸ್ ಸೋಶಿಯಲಿಸ್ಟ್ ಮುಖಂಡ ಆಚಾರ್ಯ ನರೇಂದ್ರ ದೇವೋ ಅವರನ್ನು ಅನಾರೋಗ್ಯದ ಕಾರಣದಿಂದ ಬಿಡುಗಡೆ ಮಾಡಲಾಗಿದೆ.

ಶ್ರೀ। ಭುಲ್ಲಾಭಾಯ್ ದೇಸಾಯಿಯವರು

ಪೂನೆಯ ಸಾಸೂನ್ ಆಸ್ಪತ್ರೆಯಲ್ಲಿದ್ದ ಮೇಲ್ಕಂಡ ಮುಹನೀಯರಿಗೆ ಕೊಂಚ ಆರೋಗ್ಯವುಂಟಾಗಿ ಅವರೀಗ ಬೊಂಬಯಿಗೆ ತೆರಳಿದ್ದಾರೆ. ಅವರಿಗಿನ್ನು ೩ ವಾರಗಳ ಸಂಪೂರ್ಣ ವಿಶ್ರಾಂತಿ.

ಪಾಟ್ನಾ ಜಿಲ್ಲಾ ಬೋರ್ಡು

ಬಿಹಾರು ಪ್ರಾ. ಕಾ. ಕಮಿಟಿಯ ಆಜ್ಞೆಯಂತೆ ಪಾಟ್ನಾ ಜಿಲ್ಲಾ ಬೋರ್ಡಿನ ಚೆಯರ್‌ಮ್ಯಾನ್, ವೈಸ್–ಚೆಯರ್‌ಮ್ಯಾನ್ ಕೂಡ ೩೨ ಮಂದಿ ಕಾಂಗ್ರೆಸ್ ಮೆಂಬರರು ರಾಜಿಕೊಟ್ಟು ಈಗ ಆ ಬೋರ್ಡಿನಲ್ಲಿ ೮ ಮಂದಿ ಮೆಂಬರರು ಮಾತ್ರ ಇದ್ದಾರೆ.

ಇಂಡಿಯದ ಯುದ್ಧ ಪ್ರಯತ್ನಗಳಿಗಾಗಿ!

ಈ ಪ್ರಯತ್ನಗಳ ಫೋಟೋಗಳನ್ನು ಎತ್ತಲು, ಇಂಡಿಯಾ ಸರಕಾರದ ಸಿಬಂದಿಗೆ ಸೇರಿದಂತೆ ಒಬ್ಬ ಯುರೋಪಿಯನ್ ಮಹಿಳಾ ಫೋಟೋಗ್ರಾಫರನ್ನು, ಎಸೆಸ್ ಹಾರ್ಡಿಂಜರನ್ನು—ತಿಂಗಳಿಗೆ ೬೦೦ ರೂಪಾಯಿಗಳ ಸಂಬಳ, (ಸ್ಪೆಶಲ್ ಫೋಟರ್ ವ್ಯಾನ್ ಸಹಿತ) ನೇಮಿಸಲಾಗಿದೆ.

ಸಿಲೋನಿಗೆ ಹೋಗಿ ಬಂದರು

ಸಿಲೋನಿನ ಶಿಷ್ಟಮಂಡಲದ ನಾಯಕ ಸರ್. ಜಿ. ಎಸ್. ಬಜಪೀ ಮುಂತಾದವರು ಸಿಲೋನಿನಿಂದ ಹಿಂದಿರುಗಿ ಮದ್ರಾಸಿಗೆ ಬಂದರು. ಅವರ ವರದಿ ಇನ್ನೆರಡು ವಾರಗಳಲ್ಲಿ ಪ್ರಕಟವಾಗಲಿದೆ.

ಲಾರ್ಡ್ ಲಿನ್‌ಲಿತ್‌ಗೋರವರೇ ನಮ್ಮ ವೈಸರಾಯರು

ನಮ್ಮ ವೈಸರಾಯರಾಗಿ ಇನ್ನೂ ಒಂದು ವರ್ಷವಿರುವಂತೆ ಲಾರ್ಡ್ ಲಿನ್‌ಲಿತ್‌ಗೋರವರಿಗೆ ಸಾರ್ವಭೌಮರ ಅಪ್ಪಣೆಯಾಗಿದೆ. ೧೯೪೩ನೇ ಇಸ್ವಿ ಎಪ್ರಿಲಿನ ವರೆಗೆ ಈ ಅಧಿಕಾರ ಮುಂಬರಿದಿದೆ.

ಶ್ರೀ। ಎಂ. ಆರ್. ಭಟ್ಟರ ಸತ್ಯಾಗ್ರಹ—ದಂಡನೆ

ನಮ್ಮ ಮುನಿಸಿಪಲ್ ಕೌನ್ಸಿಲರರಾದ ಶ್ರೀ। ಎಂ. ಆರ್. ಭಟ್ಟರವರು ಬೊಂಬಯಿಯತ್ತ ಈಚೆಗೆ ತೆರಳಿದ್ದು ಕಳೆದ ತಾ. ೨೦ರಲ್ಲಿ ಹುಬ್ಬಳ್ಳಿಯಲ್ಲಿ ಸತ್ಯಾಗ್ರಹವಾಚರಿಸಿ ಅವರು ೩ ತಿಂಗಳ ಕಠಿನ ಸಜೆಗೆ ಗುರಿಯಾಗಿರುವರೆಂದು ತಿಳಿದು ಬಂದಿದೆ.

ಕೊನೆಯಚ್ಚೊತ್ತು

ಇರಾನು ಏಕ್ಸಿಸ್ ರಾಷ್ಟ್ರಗಳೊಡನೆ ತನಗಿದ್ದ ಬಾಂಧವ್ಯವನ್ನು ಕಡಿದು ಕೊಂಡು ಜರ್ಮನಿ, ಇಟೆಲಿ, ರುಮೇನಿಯಗಳ ತನ್ನ ಪ್ರತಿನಿಧಿಗಳನ್ನು ಹಿಂದೆ ಕರೆಸಿಕೊಂಡಿದೆ;—ರಷ್ಯದ ಮಧ್ಯರಂಗದಲ್ಲಿ ಜರ್ಮನರು ತಮ್ಮ ರಕ್ಷಣೆಯನ್ನು ಮಾತ್ರ ಮಾಡಿಕೊಳ್ಳುತ್ತಿದ್ದಾರೆ; ಲೆನಿನ್‌ಗ್ರಾಡಿನ ಸುತ್ತ ಘೋರ ಕಾದಾಟ ನಡೆಯುತ್ತಿದ್ದು ರಷ್ಯದವರು ಬಲವಾದ ಮರುದಾಳಿ ಹೂಡಿದ್ದಾರೆ; ಒಡೆಸದ ಬಳಿ ರಷ್ಯದವರು ಶತ್ರುಗಳನ್ನು ಕೆಲವೈಲಿಗಳ ದೂರಕ್ಕೆ ಅಟ್ಟಿದ್ದಾರೆ.

ಶ್ರೀ। ಎ. ವಿ. ಥಾಕ್ಕರರಿಗೆ ಮಾನಪತ್ರ

ಹರಿಜನ ಸೇವಕ ಸಂಘದ ಜನರಲ್ ಸೆಕ್ರೆಟರಿಯಾದ ಶ್ರೀ। ಎ. ವಿ. ಥಾಕ್ಕರರಿಗೆ ನಾಳೆ ಬೆಳಿಗ್ಗೆ ಗಂಟೆ ೯ಕ್ಕೆ ಮಂಗಳೂರು ಮುನ್ಸಿಪಲ್ ಕೌನ್ಸಿಲಿನವರು ಮು। ಆಫೀಸಿನಲ್ಲಿ ಒಂದು ಸ್ವಾಗತ ಮಾನಪತ್ರವನ್ನು ಸಮರ್ಪಿಸಲಿರುವರು.

ಹಿಂದುಸ್ಥಾನ ಸ್ಕೌಟ್ ದಿನಾಚರಣೆ—ಉಡುಪಿ

ಈ ದಿನಾಚರಣೆ ಬರುವ ಅಕ್ಟೋಬರ ತಾ. ೪ರಲ್ಲಿ ಸಂಜೆ ಗಂಟೆ ೪ಕ್ಕೆ ಉಡುಪಿ ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ಶ್ರೀ। ಎ. ಬಿ. ಸೆಟ್ಟಿ, ಎಂ. ಎಲ್. ಎ., ಇವರ ಅಧ್ಯಕ್ಷತೆಯಲ್ಲಿ ಜರುಗಲಿದೆ. ಸ್ಕೌಟ್ ರ್ಯಾಲಿ, ಮೆರವಣಿಗೆ, ಶಿಬಿರಾಗ್ನಿ ಇತ್ಯಾದಿ ಮನೋಹರ ಕಾರ್ಯಕ್ರಮಗಳಿವೆ.

ಮಂಗಳೂರು

ಕಾಂಗ್ರೆಸ್ ಕೆಲಸಗಾರರ ಸಭೆ

ಕಳೆದ ತಾ. ೨೩ನೇ ಅಪರಾಹ್ನ ಸ್ಥಳೀಯ ಕಾಂಗ್ರೆಸ್ ಭವನದಲ್ಲಿ, ಜಿಲ್ಲೆಯ ಕಾಂಗ್ರೆಸ್ಸಿಗರ ಸಭೆ ಜರಗಿತು. ಶ್ರೀ। ದಾಮೋದರ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ತಾ. ೨೨ರ ಮೊದಲ್ಗೊಂಡು ಕರ್ನಾಟಕದಲ್ಲಿ ಸಂಚಾರ ಕಾರ್ಯಕ್ರಮವನ್ನು ಕೈಗೊಂಡಿರುವ ಆಚಾರ್ಯ ಕೃಪಾಲನಿಯವರು ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸಿಗರಿಗೆ ಕೊಟ್ಟ ಸಂದೇಶವನ್ನು ಓದಿ ಅಧ್ಯಕ್ಷರು ಸಭೆಯ ಉದ್ದೇಶಗಳನ್ನು ವಿವರಿಸಿದರು. ರಚನಾತ್ಮಕ ಕಾರ್ಯಕ್ರಮಗಳ ಕುರಿತು ವಿಚಾರ ವಿನಿಮಯಗಳಾದ ಬಳಿಕ ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆ, ಎಂ ಎಲ್. ಎ. (ಸೆಂಟ್ರಲ್) ಇವರ ನೇತೃತ್ವದಲ್ಲಿ ಖಾದೀ ಕೇಂದ್ರವೊಂದನ್ನು ತೆರೆಯಲು ಸ್ಥಾಯೀ ಸಮಿತಿಯೊಂದು ಆರಿಸಲ್ಪಟ್ಟಿತು.

ಅಕ್ಕಿಯ ಡಿಪೋಗಳು

ಬಂದರದಲ್ಲಿ "ಕನರಾ ಚೇಂಬರ್ ಆಫ್ ಕ್ಯಾಮರ್ಸ್" ಕಟ್ಟಡದ ವಠಾರದಲ್ಲಿ, ಮಂಗಳೂರಿನ ಬಡ ಜನರ ಉಪಯೋಗಕ್ಕಾಗಿ ಅಕ್ಕಿ ಡಿಪೋಗಳನ್ನು ತೆರೆಯುವ ಕುರಿತು ಆಲೋಚಿಸಲು ನಾಗರಿಕರ ಸಮಿತಿಯೊಂದು ಈಚಿಗೆ ಶ್ರೀ। ಬಿ. ವೆಂಕಟರಾವ್ ಬಾಳಿಗರ ಅಧ್ಯಕ್ಷತೆಯಲ್ಲಿ ಕೂಡಿ ಬಂದಿದ್ದು ಶ್ರೀ।ಗಳಾದ ಬಿ. ಪೈಕುಂಠ ಬಾಳಿಗ, ಸೇಟ್ ವಿಠಲ್ದಾಸ ಪುರುಷೋತ್ತಮ್, ಎಂ. ಅಣ್ಣಪ್ಪ ನಾಯಕ್, ಪಿ. ಎಫ್. ಎಸ್. ಅಲ್ಬುಕರ್ಕ್, ಕೆ. ಲಕ್ಷ್ಮಣ್ ಪೈ, ಮಣೇಲ್ ರಘುನಾಥ ನಾಯಕ್, ಮೋರಿಸ್ ಜಿ. ಕೌಟಿನ್ಹ, ದಿವಾನ್ ಬಹದೂರ್ ಪಿ. ಸಿ. ಲೋಬೋ, ರಾವ್ ಸಾಹೇಬ್ ಪಿ. ಆರ್. ಆರ್. ಪೂಂಜ ಇವರು ೯ ಮಂದಿಯುಳ್ಳ ಒಂದು ವರ್ಕಿಂಗ್ ಕಮಿಟಿಯ ರಚನೆಯಾಯಿತು. ಇದೇ ಅಕ್ಟೋಬರ ತಾ. ೧ರಿಂದ ೩ ತಿಂಗಳ ವರೆಗಾದರೂ ಸೇರಿಗೆ ೨ ಆಣೆಯಂತೆ ಅಕ್ಕಿ ಮಾರಾಟ ಮಾಡುವ ಡಿಪೋಗಳನ್ನು ತೆರೆಯಲು ಹಣ ಸಂಗ್ರಹಿಸುವಂತೆ ನಿರ್ಧರಿಸಿದ್ದಲ್ಲದೆ, ಆಲ್ಲೇ ಆ ಕಾರ್ಯಕ್ಕಾಗಿ, ೯೦ ರೂಪಾಯಿಗಳ ಸಂಗ್ರಹವೂ ಆಯಿತು.

ಜಿಲ್ಲಾ ಬೋರ್ಡಿನ ಜರೂರು ಸಭೆ

ಸ್ಥಳೀಯ ಜಿಲ್ಲಾ ಬೋರ್ಡಿನ ಆಫೀಸಿನಲ್ಲಿ ಇಂದು ಬೆಳಿಗ್ಗೆ ನಮ್ಮ ಜಿಲ್ಲಾ ಬೋರ್ಡಿನ ಜರೂರು ಎಂಟ್ಗ್ ಒಂದು ನೆರೆಯಲಿದೆ. ಎಲಿಮೆಂಟರಿ ವಿದ್ಯಾಭ್ಯಾಸದ ಫಂಡಿನ ಸಂಬಂಧವಾಗಿ ಸರಕಾರವು ಕೊಟ್ಟಿರುವ ಸೂಚನೆಗಳನ್ನು ಸಮಾಲೋಚಿಸಿ, ಅದರ ವಿಷಯದಲ್ಲಿ ಬೋರ್ಡಿನ ಅಭಿಪ್ರಾಯವನ್ನು ಕೂಡಲೇ ಸರಕಾರಕ್ಕೆ ತಿಳಿಸುವ ಉದ್ದೇಶಕ್ಕಾಗಿ ಈ ಜರೂರು ಸಭೆ. ಈಗ ಉಪಾಧ್ಯಾಯರಿಗೆ ಇನ್ಕ್ರಿಮೆಂಟ್ ಕೊಡದೆಯೂ ಅವರ ಸಂಬಳದಲ್ಲಿ ರೂಪಾಯಿಗೆ ಎರಡಾಣೆ ಕಡಿತ ಹಾಕಿಯೂ ೧೯೪೧-೪೨ರ ಬಜೇಟ್ ಅಂದಾಜಿನ ಎಲಿಮೆಂಟರಿ ವಿದ್ಯಾ ನಿಧಿಯಲ್ಲಿ ರೂ. ೧೪೧೦೦ರ "ಡಿಫಿಶಿಟ್" ಇದೆ. ಇನ್ನು ಆ ಇನ್ಕ್ರಿಮೆಂಟುಗಳನ್ನು ಅವರಿಗೆ ಕೊಟ್ಟು ಆ ಎರಡಾಣೆಯ ಕಡಿತವನ್ನೂ ರದ್ದು ಮಾಡಬೇಕೆಂದಾದರೆ, ಆಗ ಒಟ್ಟಿಗೆ ರಿಕರಿಂಗ್ ಡಿಫಿಶಿಟ್ (ಆ ರೂ. ೧೪೧೦೦ರ ಸಹಿತ) ರೂ. ೬೬,೬೭೫ರಷ್ಟಾಗುತ್ತದೆ. ಈಗ ಬೋರ್ಡ್ ೧೪ ಶಾಲೆಗಳನ್ನು ಮುಚ್ಚಿ, ಉಪಾಧ್ಯಾಯರ ೩೦ ಸ್ಥಾನಗಳನ್ನು ರದ್ದು ಮಾಡಿದುದರಿಂದ ವರ್ಷಕ್ಕೆ ರೂ. ೯೬೩೦ ರೂಪಾಯಿಗಳ ಉಳಿತಾಯ ಎದೆ. ಎ. ಡೈರೆಕ್ಟರರ ಸೂಚನೆಯಂತೆ ೧೪೩ ಉಪಾಧ್ಯಾಯರನ್ನು ಕೆಲಸದಿಂದ ತೆಗೆದರೆ ವರ್ಷಕ್ಕೆ ಇನ್ನೂ ರೂ. ೩೫,೭೦೦ರಷ್ಟು ಉಳಿತಾಯವಾಗಲಿದೆ. ಇಷ್ಟಾದರೂ "ರಿಕರಿಂಗ್ ಡಿಫಿಶಿಟ್" ತುಂಬಲಿಕ್ಕೆ ೪೧,೧೪೩ ರೂ.ಗಳು ಬೇಕಾಗುತ್ತವೆ. ಈ ಡಿಫಿಶಿಟಿನ (ರಿಕರಿಂಗ್) ಭರ್ತಿಗಾಗಿ ವಿದ್ಯಾ ತೆರಿಗೆಯನ್ನು ರೂಪಾಯಿಗೆ ೪॥ ಪೈಯಿಂದ ೩ ಪೈಯಷ್ಟು ಹೆಚ್ಚಿಸಿ ೭॥ ಪೈ ಮಾಡುವುದೇ? ಅಥವಾ ಬೋರ್ಡ್, ಡೈರೆಕ್ಟರ ಸೂಚನೆಯಂತೆ ಇನ್ನೂ ಹೆಚ್ಚಿನ ಉಪಾಧ್ಯಾಯರ ಪೋಸ್ಟ್ಗಳನ್ನು ರದ್ದು ಮಾಡಲೊಪ್ಪದಿದ್ದರೆ ಆಗ ಬೀಳುವ ಡಿಫಿಶಿಟ್ನ್ನು—ರೂ. ೭೬,೬೪೩ನ್ನು—ಭೂಕಂದಾಯದ ಮೇಲಿನ ತೆರಿಗೆ ಹೆಚ್ಚಿಸಿ—ರೂಪಾಯಿಗೆ ೫॥ ಪೈಯಿಂದ ೧೦ ಪೈಗೇರಿಸಿ—ಭರ್ತಿ ಮಾಡಿಕೊಳ್ಳುವುದೇ? ಎಂಬುದೇ ವಿಚಾರಣೀಯವಾದ ಮುಖ್ಯ ಪ್ರಶ್ನೆಯಾಗಿದೆ. ಅಂದರೆ ವಿದ್ಯಾ ತೆರಿಗೆಯನ್ನು ೭॥ ಪೈಗೆ ಹೆಚ್ಚಿಸಿ, ೧೪೩ ಉಪಾಧ್ಯಾಯರ ಸ್ಥಾನವನ್ನೂ ರದ್ದು ಮಾಡುವುದೇ ಅಥವಾ ಆ ಸ್ಥಾನಗಳನ್ನು ರದ್ದು ಮಾಡದೆ, ನೆಲ ಕಂದಾಯದ ಮೇಲಿನ ತೆರಿಗೆಯನ್ನು ರೂಪಾಯಿಗೆ ೧೦ ಪೈಗೆ ಹೆಚ್ಚಿಸುವುದೇ ಎಂಬುದರಲ್ಲಿ ಒಂದು ತೀರ್ಮಾನವಾಗಬೇಕಾಗಿದೆ.

ಇಂಗ್ಲೆಂಡಿನಲ್ಲಿ ದಕ್ಷಿಣ ಕನ್ನಡಿಗರು

ಕಾರ್ಕಳ ಬೋರ್ಡ್ ಸೆಕಂಡರಿ ಶಾಲಾ ಹೆಡ್ಮಾಸ್ಟರ್ ದಿವಂಗತ ಲಾಭಾದಾಯ ಶಿವರಾಯರ ಪುತ್ರರಾದ ಶ್ರೀ। ಎಲ್. ಜಿ. ರಾವ್, ಎಂ. ಎ., ಇವರು ೧೯೩೫ನೇ ಇಸವಿಯಲ್ಲಿ ಐ. ಸಿ. ಎಸ್. ಮತ್ತು ಇತರ ಉಚ್ಚ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ತೆರಳಿದ್ದು ಈಗ "ಚೀಫ್ ವಯರ್ಲೆಸ್ ಮೆಕೆನಿಕಲ್ ಇಂಜಿನಿಯರಿಂಗ್ (ಆರ್. ಎಫ್. ಎ.) ಶಿಕ್ಷಣವನ್ನು ವುಲ್ವರ್ ಹೆಂಪ್ಟನ್ನಿನಲ್ಲಿ ಪಡೆದು, ಈಗ ಇಂಗ್ಲೆಂಡಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇವರು ೩೦ ವರ್ಷದ ಸಾರಸ್ವತ ಸಮಾಜದ ಯುವಕರು. ಶ್ರೀ। ಎಂ. ಶಿವರಾಯರ ಸವಿೂಪ ಸಂಬಂಧಿಗಳು.

ಬರ್ಮಾದ ಕರಾರನ್ನು ಕೈ ಬಿಡಬೇಕು

ಶಿವ ಗ್ರಾಮದಲ್ಲಿ ತಮ್ಮ ಭೇಟಿ ಮಾಡಿದ ಬರ್ಮಾ—ಇಂಡಿಯದವರ ಒಂದು ಶಿಷ್ಟ ಮಂಡಲದ ಮುಂದೆ ಗಾಂಧಿಜಿಯವರು "ಬಜಪಿಯವರ ಆ ಕರಾರಿನಿಂದ ವಿದೇಶದಲ್ಲಿನ ಹಿಂದೀಯರಿಗೆ ಹಾನಿ ಇದೆ; ಅದನ್ನು ಕೈಬಿಡಿ" ಎಂದರು. ಈ ಮಂಡಲದವರು ವೈಸರಾಯರನ್ನೂ ಕಂಡು ಮಾತಾಡಲಿದ್ದಾರೆ.



ಅವನೊಂದಿಗೇ ಬೆಳೆಯುವ ಒಂದನ್ನು ಕೊಳ್ಳಿರಿ!

ಮೆಗುವಿನ ಜನನ—ವರ್ಷಗಳು ಉರುಳಿದಂತೆಲ್ಲ ಬೆಲೆಯಲ್ಲಿ ವೃದ್ಧಿಹೊಂದುವ ಬಹುಮಾನಕೊಡಲು ಎಂತಹ ಅದ್ಭುತ ಸುಸಮಯ. ಬಟ್ಟೆಗಳನ್ನು ಕೊಂಡರೆ ಜಾಗ್ರತೆ ಹರಿದುಹೋಗುತ್ತವೆ, ಒಡವೆಗಳು ಜಾಗ್ರತೆಯಾಗಿ ಬೆಲೆಯಲ್ಲಿ ಕಡಿಮೆಯಾಗುತ್ತೆ, ಇದರ ಬದಲು ಒಂದು ಅಥವಾ ಅದಕ್ಕಿಂತ ಹೆಚ್ಚಾಗಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಗಳನ್ನು ಏಕೆ ಕೊಳ್ಳಬಾರದು — ನೀವು ನಾಡುವ ಧನಸಂಚಯಗಳಲ್ಲೆಲ್ಲಾ ಅತಿ ಲಾಭಕರವಾದ್ದು. ಅದರ ಕ್ರಮ ಬಹು ಸುಲಭ-ಅದು ಹೇಗೆಂಬುದನ್ನು ನೋಡಿ :

೧. ಪೋಸ್ಟ್ ಆಫೀಸ್ನಲ್ಲಿ ನೀವು ರೂ. ೧೦, ೫೦, ೧೦೦, ೫೦೦ ಮತ್ತು ೧,೦೦೦, ನೊತ್ತಗಳಲ್ಲಿ ಸರ್ಟಿಫಿಕೇಟುಗಳನ್ನು ಕೊಳ್ಳಬಹುದು.



೨. ಅವನು ಬೆಳೆದಂತೆಲ್ಲ, ಅವನ ಹಣವು ಸಂತತವಾಗಿ ವೃದ್ಧಿಯಾಗಿ ಅವನಿಗೆ ಸುಮಾರಾಗಿ ತೀರದ ೬೧/೪ ಚಕ್ರಬಡ್ಡಿ ಗಳಿಸಿ ಕೊಡುತ್ತೆ.



೩. ಈ ಸಂಚಯದ ನೇರ ಆದಾಯ ತೆರಿಗೆಯಿಲ್ಲ. ಅವನು ಶಾಲೆಗೆ ಹೋಗಬೇಕಾದಾಗ ಅವನು ಕೊಳ್ಳಬಹುದಾದ ಬಟ್ಟೆ ಮತ್ತು ಪುಸ್ತಕಗಳ ಬಗ್ಗೆ ಯೋಚಿಸಿರಿ. ಅವನಿಗೆ ಕೊಡಬಹುದಾಗಿದ್ದ ಬಹುಮಾನಗಳಲ್ಲಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಗಳು ಉತ್ತಮವಾದುವೆಂದು ನೀವು ಆಗ ಒಪ್ಪುವಿರಿ, ಏಕೆಂದರೆ ಅವು ಅವನೊಂದಿಗೆ ಬೆಳೆದವು.



ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಗಳು

ಈ ಸರ್ಟಿಫಿಕೇಟ್ಗಳನ್ನು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್ಗಳ ಮೂಲಕ ಕೊಳ್ಳಬಹುದು. ಯಾವುದಾದರೂ ಪೋಸ್ಟ್ ಆಫೀಸ್ನಿಂದ ವಿವರಗಳನ್ನು ತಿಳಿಯಿರಿ. Ks-61-45.

ಪೋಸ್ಟಿನ ಚೀಲಗಳಿಗೆ ಬೆಂಕಿ

ಡಿಲ್ಲಿಯಿಂದ ಸಿಮ್ಲಕ್ಕೆ ಹೋಗಬೇಕಾಗಿದ್ದ ಸುಮಾರು ೧೩ ಪೋಸ್ಟಲ್ ಚೀಲಗಳಿಗೆ ಡೆಲ್ಲಿ ಫೈಲ್ಸ್ ಸ್ಟೇಶನಿನಲ್ಲಿ ಬೆಂಕಿ ಹಿಡಿಯಿತು. ಕೂಡಲೇ ನೊಂದಿಸಲ್ಪಟ್ಟಿತು. ಕೆಲವು ಕಾಗದಪತ್ರ ಸುಟ್ಟು ಹೋಗಿದೆ. ಬೆಂಕಿಯ ಕಾರಣ ತಿಳಿದಿಲ್ಲ.

ವಾರ್ತಾಗುಚ್ಛ

ಇಂಡಿಯದಿಂದ ಯುದ್ಧಕ್ಕೆ ಸಹಾಯ

ಏ.। ಅಮೆರಿಯವರು ಲ್ಯಾಟಿನ್ ಅಮೆರಿಕಕ್ಕೊಂದು ಬ್ರಾಡ್‌ಕಾಸ್ಟ್ ಭಾಷಣ ಮಾಡುತ್ತ "ಇಂಡಿಯದಲ್ಲಿ ರಾಜಕೀಯ ಚಳವಳವು ಅತಿಶಯವಾಗಿದ್ದರೂ, ಯುದ್ಧ ಸಹಾಯಕ್ಕೆ ಅಲ್ಲಿ ಕೊರತೆಯಿಲ್ಲ; ಭಾರತದ ೨೫೦ ಕಾರ್ಖಾನೆಗಳಲ್ಲಿ ಯುದ್ಧ ಸಾಮಗ್ರಿ ತಯಾರಾಗುತ್ತಿದೆ; ಪೈಸರಾಯರ ಯುದ್ಧ ನಿಧಿಗೆ ಈಗಾಗಲೇ ೩೫ ಲಕ್ಷ ಪೌಂಡು ಗಳಿಗೂ, ಬರ್ಮಾ ದೇಶೀಯ ಸಂಸ್ಥಾನ ಮತ್ತು ಪ್ರಾಂತಗಳಿಂದ ಸುಮಾರು ೩೦ ಲಕ್ಷ ಪೌಂಡುಗಳಿಗೂ ಮಿಕ್ಕಿ ವಂತಿಗೆ ವಸೂಲಾಗಿದೆ" ಎಂದು ಭಾರತವನ್ನು ಕೊಂಡಾಡಿದರು.

ಇತಿಯೋಪಿಯ ಚಕ್ರವರ್ತಿಗಳ ಮಹಾ ಔದಾರ್ಯ

ಚಕ್ರವರ್ತಿ ಹೈಲ್ ಸಿಲಾಸಿಯವರು ತಲ್ಲಿನ ಗುಲಾಮಗಿರಿಯನ್ನು ರದ್ದು ಮಾಡುವ ಮಹೋನ್ನತ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಗುಲಾಮನೆಂಬವನು ಅವನಿಗೆ ಇಷ್ಟವಿದ್ದರೆ ತನ್ನ ಯಜಮಾನನ ಚಾಕರಿ ಮಾಡಬಹುದಾದರೂ ತಿವನು ಸ್ವತಂತ್ರನಾಗಬೇಕೆಂದು ಅಪೇಕ್ಷಿಸಿದರೆ, ಅವನ ಯಜಮಾನನು ಅವನನ್ನು ತಡೆಯಕೂಡದೆಂದು ಅಪ್ಪಣೆ ಮಾಡಿದ್ದಾರೆ.

ಚೀನೀಯರಿನ್ನೂ ಯುದ್ಧ ಮಾಡುವರು

ಚೀನವು ಕಳೆದುಕೊಂಡ ಪ್ರತಿಯೊಂದು ಪ್ರಾಂತವೂ ತಿರುಗಿ ವಶವಾಗುವ ವರೆಗೆ ಚೀನೀಯರು ಯುದ್ಧ ಮಾಡುವುದೇ ಖಂಡಿತವೆಂದು ಮಾರ್ಶಲ್ ಚುಂಗ್ ಕೈ ಶೇಕರು ಪ್ರಕಟಿಸಿರುವರು.

ಆಫ್ರಿಕದಲ್ಲಿ ಜರ್ಮನಿಯ ದಾಳಿಯೇ?

ಜರ್ಮನಿಯ ವಶವಿರುವ ಫ್ರಾನ್ಸಿನ ಭಾಗಗಳಲ್ಲಿ ಜರ್ಮನ್ ಸೇನೆಗಳೀಗ ತುಂಬಿಕೊಂಡಿರುವವೆಂದೂ ಜರ್ಮನಿ ಇವನ್ನು ಮುಂದೆ ಆಫ್ರಿಕದಲ್ಲಿ ಬಳಸಿಕೊಳ್ಳಬಹುದೆಂದೂ ಹೇಳಲಾಗಿದೆ.

ಹೊಲ್ಲೆಂಡಿನ ಮಹಾರಾಣಿಯವರ ಆಸ್ತಿ

ಹೊಲ್ಲೆಂಡಿನ ಮಹಾರಾಣಿ ವಿಲ್‌ಹೆಲ್ಮಿನಾರವರ ಯಾವತ್ತು ಆಸ್ತಿ ಪಾಸ್ತಿಗಳನ್ನೂ ಜರ್ಮನ್ ಅಧಿಕಾರಿಗಳು ಕಿತ್ತುಗೊಂಡಿದ್ದಾರೆ; ಅಲ್ಲದೆ ಹೊಲ್ಲೆಂಡಿನ ರಾಜ ಮನೆತನದ ಜೀವಂತ ವ್ಯಕ್ತಿಗಳ ಹೆಸರನ್ನು ಹೊಲ್ಲೆಂಡಿನ ವ್ಯಾಪಾರಿ ಸಂಸ್ಥೆಗಳಾಗಲೀ, ಖಾಸಗಿ ಸಂಸ್ಥೆಗಳಾಗಲೀ ಉಪಯೋಗಿಸಬಾರದೆಂದೂ, ಅವರ ಚಿತ್ರಗಳನ್ನೂ ಯಾರೂ ಬಳಸಕೂಡದೆಂದೂ ಆ ಅಧಿಕಾರಿಗಳ ಆಜ್ಞೆ.

ಇರಾನಿಗೆ ಹೊಸ ಮಂತ್ರಿಮಂಡಲ

ಹೊಸ ಷಹಾರವರು ಮಿ। ಫೆರೋಗಿಯವರಿಗೆ ಶಾಶ್ವತವಾಗಿ ಪ್ರಧಾನರ ಪಟ್ಟವನ್ನು ಕೊಟ್ಟಿದ್ದಾರೆ. ಅಲ್ಲೀಗ ಹೊಸ ಮಂತ್ರಿಮಂಡಲ ರಚಿಸುವ ಕಾರ್ಯಗಳೀಗ ನಡೆಯುತ್ತಿದೆ. ಷಹಾರವರು ಹಲವು ಮಂದಿ ರಾಜಕೀಯ ಬಂದಿಗಳಿಗೆ ಕೃಪೆ ತೋರಿ ಅವರನ್ನು ಬಿಡುಗಡೆ ಮಾಡಿಸಿದ್ದಾರೆ. ಇರಾನ್ ಸಿಂಹಾಸನಕ್ಕೆ ಸಂಬಂಧಿಸಿದ ರತ್ನಾಭರಣಗಳನ್ನು ಒಂದು ಸಮಿತಿ ಪರೀಕ್ಷಿಸುತ್ತಿದೆ. ಕಾರಣ ಮಾಜಿ ಷಹಾ ಅವುಗಳಲ್ಲಿ ಕೆಲವನ್ನು ಮೊದಲೇ ಕಳುಹಿಸಿದ್ದನೆಂಬ ವಾರ್ತೆ ಹಬ್ಬಿದುದೇ.

ರಮಣೀಯ ಲೀಲಾ ಚೆಟ್ನಿಸ್,
ನಿಮ್ಮ ಸೌಂದರ್ಯದ ರಹಸ್ಯವನ್ನು ನಮಗೆ ತಿಳಿಸುವಿರಾ?
"ನನ್ನ ಸೌಂದರ್ಯ ರಹಸ್ಯವು ಅತಿ ಸುಲಭವಾದುದು. ನಾನು ಸೌಮ್ಯ ರೀತಿಯಿಂದ ಶುದ್ಧ ಮಾಡುವ ಲಕ್ಸ್ ಟಾಯಿಲೆಟ್ ಸೋಪಿನ ಮೇಲೆ ವಿಶ್ವಾಸ ವಿಡುತ್ತೇನೆ. ನನ್ನ ಚರ್ಮವನ್ನು ಈ ಸೌಮ್ಯವಾದ ಸಾಬೂನು ನುಣುಪಾಗಿಯೂ ಮೃದುವಾಗಿಯೂ ಇಡುತ್ತದೆ. ಅದರ ಸುವಾಸನೆಯು ನವ ಚೇತನವನ್ನುಂಟುಮಾಡುವುದಲ್ಲದೆ ಆಕರ್ಷಣೀಯವಾಗಿಯೂ ಇದೆ."
LUX
TOILET SOAP
ಮನಮೋಹಿನಿ ಲೀಲಾ ಚಿಟ್ನಿಸಳಿಂದ ಸ್ವಂತ ಅನುಭವವನ್ನು ತಿಳಿದುಕೊಳ್ಳಿರಿ. ನಿಮ್ಮ ಚರ್ಮಕ್ಕೆ ಲಕ್ಸ್ ಟಾಯಿಲೆಟ್ ಸೋಪಿನ ಚಿಕಿತ್ಸೆಯನ್ನು ಕೊಡಿರಿ. ನಿತ್ಯವೂ ನಿಮ್ಮ ಮುಖವನ್ನು ಆದರ ವಿಪುಲವಾದ ನೊರೆಯಿಂದ ತೊಳೆದುಕೊಳ್ಳಿರಿ. ಲಕ್ಸ್ ಟಾಯಿಲೆಟ್ ಸೋಪಿನ ಚೇತನವುಳ್ಳ ನೊರೆಯು ಚರ್ಮರಂಧ್ರಗಳಲ್ಲಿ ಹೊಕ್ಕಿ, ಕಲೆಯನ್ನುಂಟುಮಾಡುವ ದೂಳು, ಕೊಳೆಗಳನ್ನು ಶುದ್ಧನೂಡುತ್ತದೆ. ಕ್ರಮೇಣ ನಿಮ್ಮ ಚರ್ಮವು ನುಣುಪಾಗಿಯೂ ಮೃದುವಾಗಿಯೂ, ಚೆಲುವಾಗಿಯೂ ಆಗುವುದು. ಹೀಗಿರಲು ಮನೋಹರಿ ಲೀಲಾ ಚಿಟ್ನಿಸ್ ತನ್ನ ಚರ್ಮ ಸೌಂದರ್ಯಕ್ಕೆ ಲಕ್ಸ್ ಟಾಯಿಲೆಟ್ ಸೋಪನ್ನುಪಯೋಗಿಸುವುದರಲ್ಲಿ ಆಶ್ಚರ್ಯವೇನು? ಲೀಲಾ ಚಿಟ್ನಿಸ್ ಸ್ವಹಸ್ತದಿಂದ ಸಹಿಮಾಡಿದ ಚಿತ್ರಪ್ರತಿ ನಿಮಗೊಂದು ಬೇಕೊ? ಹಾಗಾದರೆ ಒಂದು ಪೋಸ್ಟ್‌ಕಾರ್ಡನ್ನು ಈ ವಿಳಾಸಕ್ಕೆ ಬರೆಯಿರಿ, Dept. KN 15, Post Box 758, Bombay.
ಲಕ್ಸ್ ಟಾಯಿಲೆಟ್ ಸೋಪು ಚಲನಚಿತ್ರ ತಾರೆಗಳ ಸೌಂದರ್ಯದ ಸೋಪು
LTS. 46—92 KN
LEVER BROTHERS (INDIA) LIMITED

"ಗಡಿನಾಡಿನ ಗಾಂಧಿ"ಯ
ಕೆಲವು ಅನುಭವಗಳು!

"ಗಡಿನಾಡಿನ ಗಾಂಧಿ"ಯೆಂದು ಕರೆಯಲ್ಪಡುತ್ತಿರುವ ಖಾನ್ ಅಬ್ದುಲ್ ಗಫರ್‌ಖಾನರು, ಈಗ ಸರಹದ್ದು ಪ್ರಾಂತ್ಯಗಳಲ್ಲಿ ಸತ್ಯಾಗ್ರಹ ಸಮರದ ಸಂಚಾಲಕರಾಗಿದ್ದಾರೆ. ೧೯೩೧ರ ಬಳಿಕ, ಮೂರು ವರ್ಷಗಳ ಶಿಕ್ಷೆಗೊಳಗಾಗಿ, ಹಜಾರಿಬಾಗಿನ ಜೈಲಿನಲ್ಲಿ, ತುರುಂಗ ವಾಸವನ್ನನುಭವಿಸುತ್ತಿದ್ದ ಇವರೂ, ಇವರ ಸಹೋದರ ಡಾ। ಖಾನ್ ಸಾಹೇಬರೂ ೧೯೩೪ರಲ್ಲಿ ಬಿಡುಗಡೆ ಹೊಂದಿದರು. ಆ ಜೈಲು ಜೀವನದ ಮತ್ತು ಅನಂತರದ ಕೆಲವು ತಮ್ಮ ಅನುಭವಗಳನ್ನು ತಮ್ಮದೇ ಆದ 'ಪುಷ್ಟನ್' ಪತ್ರಿಕೆಯಲ್ಲಿ ಬರೆದಿರುವರು. ಅವುಗಳಲ್ಲಿ ಕೆಲವನ್ನು ಇಲ್ಲಿ ಎತ್ತಿ ಬರೆಯಲಾಗಿದೆ.

"೧೯೩೪ರಲ್ಲಿ ನನ್ನ ಮತ್ತು ನನ್ನಣ್ಣನ ಬಿಡುಗಡೆಯಾದರೂ, ನಿರ್ಬಂಧ ಕಾಜ್ಞೆಗಳಿಂದಾಗಿ ಸ್ವಗ್ರಾಮಕ್ಕಾಗಲೀ ಹುಟ್ಟೂರಿಗಾಗಲೀ ಹೋಗುವಂತಿರಲಿಲ್ಲ....

"ಆ ಹೊತ್ತಿಗೆ ಜಮನಲಾಲಜಿ, ಮಹಾತ್ಮಾಜಿ ವಾರ್ಧದಲ್ಲಿರುವುದಾಗಿಯೂ ನಾವೀರ್ವರೂ ವಾರ್ಧಾಕ್ಕೆ ತೆರಳಬೇಕೆಂದೂ ತಿಳಿಸಿದರು. ಆ ಆಹ್ವಾನವನ್ನು ನಾವು ಸ್ವೀಕರಿಸಿದೆವು.

ಶಾಂತಿನಿಕೇತನದ ಕರೆ

"ಶಾಂತಿನಿಕೇತನ ಹಜಾರಿಬಾಗಿನ ಸಮೀಪದಲ್ಲಿತ್ತು. ಮೊದಲಾಗಿ, ಶಾಂತಿನಿಕೇತನಕ್ಕೆ ಹೋಗಿ, ಅಲ್ಲಿ ಠಾಗೋರರ ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸುತ್ತಿದ್ದ ನನ್ನ ಮಗನನ್ನು ಕಂಡು, ಬಳಿಕ ವಾರ್ಧಾಕ್ಕೆ ಮುಂದುವರಿಯೋಣವೆಂದು ನಿಶ್ಚೈಸಿದೆವು.

"ಆದರೆ ಪ್ರೊ। ಅಬ್ದುಲ್ ಬಾರಿಗಳ ಒತ್ತಾಯದಿಂದಾಗಿ, ಪಾಟ್ನಕ್ಕೆ ಸಾಗಿ, ಅಲ್ಲಿ ಡಾ। ರಾಜೇಂದ್ರ ಬಾಬುಗಳನ್ನೂ, ಇತರ ಬಿಹಾರಿನ ಗೆಳೆಯರನ್ನೂ ಕಂಡು, ಬೃಹತ್ ಸಭೆಯೊಂದರಲ್ಲಿ ಮಾತನಾಡಬೇಕಾಯಿತು. ಅಲ್ಲಿಂದ ಶಾಂತಿನಿಕೇತನಕ್ಕೆ ತೆರಳಿ, ಗುರುವರ್ಯರನ್ನು ಕಂಡು, ಆ ರಾತ್ರಿಯನ್ನು ಮಗನೊಡನೆ ಕಳೆದೆವು.

ವಾರ್ಧದಲ್ಲಿ

"ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸಭೆ ಕೂಡುವದಿತ್ತು. ಮಹಾತ್ಮಾಜಿಯವರನ್ನು ಸಂಧಿಸಿದೆವು.

"ಡಾ। ಮೌಲಾನಾ ಅಜಾದರು, ನಾವು ಬಂಗಾಳಕ್ಕೆ ಹೋಗಬೇಕಾಗಿಯೂ, ಅಲ್ಲಿಯ ಮುಸ್ಲಿಂ ಬಾಂಧವರು, ನಮ್ಮನ್ನು ಸ್ವಾಗತಿಸುವುದಕ್ಕೆ ಉತ್ಸುಕರಾಗಿರುವರೆಂದೂ ಹೇಳಿದರು.

"ಮಹಾತ್ಮಾಜಿ ಒಪ್ಪಲಿಲ್ಲ; ಸರಕಾರವು ನಮ್ಮನ್ನು ಪುನಃ ಬಾಧಿಸಬಹುದೆಂಬ ಸಂದೇಹದಿಂದ.

"ಆದರೆ ಮೌಲಾನರು ಒತ್ತಾಯ ಪಡಿಸಿದರು; ಗಾಂಧಿಜಿ ವಿದುರಾಡಲಿಲ್ಲ.

"ನಾವೆಲ್ಲ ಬಂಗಾಳಕ್ಕೆ ತೆರಳಿದೆವು. ಬಂಗಾಳದ ಭ್ರಾತೃ ಭಗಿನಿಯರು, ನಮಗೆ ಅಪೂರ್ವ ಸ್ವಾಗತವನ್ನಿತ್ತರು. ಬಂಗಾಳದ ಹಳ್ಳಿಗಳನ್ನು ಸುತ್ತಾಡಿದೆವು. ಮುಸ್ಲಿಂ ಬಾಂಧವರ ಅಲ್ಲಿನ ಜೀವನ ತೀರಾ ದುಃಸ್ಥಿತಿಯಲ್ಲಿತ್ತು.

"ಕೆಲವು ದಿನಗಳನ್ನು, ಬಂಗಾಳದ ಪಠಾಣರ ಜತೆಯಲ್ಲಿ ಕಳೆದೆವು.

....ನನ್ನ ಹೃದಯದಲ್ಲಿ, ಬಂಗಾಳದ ಮುಸ್ಲಿಮರಿಗೆ ಒಂದು ಹಿರಿದಾದ ಸ್ಥಾನವಿತ್ತೆ. ಪುನಃ ಬಂಗಾಳಕ್ಕೆ ತೆರಳಿ, ಅವರ ಸೇವೆಯನ್ನು ಕೈಗೊಳ್ಳಬೇಕೆಂಬ ನನ್ನ ಆಸೆ ಹಿರಿದಾಗುತ್ತಾ ಬಂತು.

ಮುಂಬಯಿಯ ಅಧಿವೇಶನದ ಬಳಿಕ

"ಮುಂಬಯಿಯಲ್ಲಿ ಆ ವರ್ಷದ ಕಾಂಗ್ರೆಸ್ ಅಧಿವೇಶನವು ಅತಿ ಎಚ್ಚರಿಕೆಯಿಂದ ಜರುಗಿತು.

"ಆಗಲೇ ಕ್ರೈಸ್ತಿಯನ್ನರ ಶಿಷ್ಟಮಂಡಳಿಯೊಂದು ನನ್ನನ್ನು ಸಂಧಿಸಿದುದು. ಅವರ ಒಂದು ಸಭೆಯಲ್ಲಿ, ಖುದ್ದೆ ಖಿದ್ಮತ್‌ಗಾರರ (ದೇವರ ಸೇವಕರು) ಕುರಿತು, ನಾನು ಮಾತನಾಡಬೇಕೆಂದು ಅವರು ಆಶಿಸಿದ್ದರು. ಆ ಆಮಂತ್ರಣವನ್ನು ನಿರಾಕರಿಸುವಂತಿರಲಿಲ್ಲ!

"ಬಳಿಕ ಸಂಯುಕ್ತ ಪ್ರಾಂತದಲ್ಲಾದ ಒಂದು ಸ್ವದೇಶಿ ಪ್ರದರ್ಶನದಲ್ಲೂ ಭಾಗ ವಹಿಸಿದೆ.

"ನನ್ನ ಮನಸ್ಸಿನಲ್ಲಿ ಕೊರೆಯುತ್ತಲೇ ಇತ್ತು; ಬಂಗಾಳದ ಪ್ರವಾಸದ ಯೋಜನೆ.

"ಗಾಂಧಿಜಿಯವರೊಡನೆ, ಈ ಕುರಿತು ಸಂಭಾಷಿಸಿದೆ. ಅವರೂ ಪ್ರೋತ್ಸಾಹವಿತ್ತರು. ದಶಂಬರ ಲಕ್ಕೆ ಬುಂಗಾಳವನ್ನು ತಲಪಬೇಕೆಂಬ ನಿಶ್ಚಯವಾಯಿತು!

ಆದರೆ—?

"ಸರಕಾರ ಇದನ್ನು ಇಚ್ಛಿಸಲಿಲ್ಲ. ನನ್ನ ಚಲನವಲನಗಳನ್ನು, ಅದು ಈಕ್ಷಿಸುತ್ತಲೇ ಇತ್ತು.

"ಸರಿ! ದಶಂಬರ ಏಳರಂದು ವಾರ್ಧದಲ್ಲಿ ನನ್ನನ್ನು ಬಂಧಿಸಿದರು. ಕಾರಣ, ಕ್ರೈಸ್ತಿಯನ್ನರ ಸಂಘದಲ್ಲಿ, ನಾನು ಮಾಡಿದ ಭಾಷಣವು, ರಾಜದ್ರೋಹಕರವಾಗಿತ್ತಂತೆ!

"ಕ್ರೈಸ್ತಿಯನ್ನರ ಸಂಘದಲ್ಲಿ ಅಂದು ನಾನು ರಾಜದ್ರೋಹಾತ್ಮಕ ಭಾಷಣವಿತ್ತುದು ನಿಜವೇ?

"ಅಲ್ಲ! ಬಂಗಾಳಕ್ಕೆ ನಾನು ಹೋಗುವುದು ಅಧಿಕಾರಿಗಳಿಗೆ ಮಹಾಪರಾಧವಾಗಿ ತೋರಿತು. ಇದಕ್ಕಾಗಿ ನನ್ನ ಬಾಧನವಾಗಿರಬೇಕೆಂದುಕೊಂಡೆ.

"ನಾನು ಮುಂಬಯಿಗೆ ಸಾಗಿಸಲ್ಪಟ್ಟೆ. ಪೋಲೀಸ್ ಮ್ಯಾಜಿಸ್ಟ್ರೇಟ ಮಹಾಶಯರೊಬ್ಬರು, ನನ್ನ ಮೊಕದ್ದಮೆಯ ವಿಚಾರಣೆಯ ದಿನವನ್ನು ನಿಶ್ಚೈಸಿದರು. ನನ್ನನ್ನು ಏಕಾಂತವಾಸಕ್ಕೆ ಗುರಿ ಮಾಡಿದರು.

"ಅಂತೂ ನನಗೆ ದೊರಕಿದ್ದ ಸ್ವಾತಂತ್ರ್ಯವೂ ಕಸಿದುಕೊಳ್ಳಲ್ಪಟ್ಟಿತು."

ಹಿಂದೀ ಸೈನಿಕರ ಮಕ್ಕಳಿಗೆ ಹೊಸ್ಟೆಲ್

ಬೊಂಬಯಿ ಸರಕಾರವು ಹಿಂದೀ ಸೈನಿಕರ ಮಕ್ಕಳಿಗಾಗಿ ೫ ಹೊಸ್ಟೆಲ್‌ಗಳನ್ನು ತೆರೆಯಲು ಮಂಜೂರುಮಾಡಿದೆ. ಪ್ರತಿಯೊಂದು ಹೊಸ್ಟೆಲಿಗೆ ತಗಲುವ ವೆಚ್ಚ ರೂ. ೧೦ ಸಾವಿರ. ಪ್ರತಿಯೊಂದರಲ್ಲಿ ೪೦ ಮಕ್ಕಳಿಗೆ ಸ್ಥಳ ಸೌಕರ್ಯವಿದೆ.

ದಂಡನೆ ಕಡಿಮೆಯಾಯಿತು

ಬಂಗಾಳದ ಲೇಬರ್ ಮುಖಂಡರಾದ ಬಂಗಾಳದ ಮಾಜಿ ಮಂತ್ರಿ ಎಂ। ನೌಶೇರ್ ಆಲಿ, ಎಂ। ಡಬ್ಲ್ಯೂ. ರಹಿಮನ್ ಎಂ. ಎಲ್. ಎ. ಮತ್ತು ಎಂ। ಅಬ್ದುಲ್ ವಾಹಬ್ ಬೊಕ್ಕಾನಗ್ರಿ ಎಂ. ಎಲ್. ಎ. ಅವರು ಸರಕಾರದ ಆಜ್ಞೆಯನ್ನು ಉಲ್ಲಂಘಿಸಿದ ತಪ್ಪಿಗೆ ಸಜೆಗುರಿಯಾಗಿದ್ದು ಈಗ ಇಪ್ಪತ್ತ ನಾಲ್ಕು ಪರಗಣಗಳ ಜಿಲ್ಲಾ ಜಡ್ಜರ ಅಪ್ಪಣೆಯಂತೆ ಆ ಸಜೆ ರದ್ದಾಗಿ, ಬದಲಿಗೆ ರೂ. ೬೦೦ರಿಂದ ೧೦೦ ರೂಪಾಯಿಗಳ ವರೆಗಿನ ಜುಲ್ಮಾನೆ ಮಾತ್ರ ತೆತ್ತರೆ ಸಾಕೆಂದಾಗಿದೆ.

೬ ಮಂದಿ ಕಾಂಗ್ರೆಸ್ ಸದಸ್ಯರಿಗೆ ಉಚ್ಚಾಟನೆಯ ಅಪ್ಪಣೆ

ಗುಂಟೂರು ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಸದಸ್ಯರಲ್ಲಿ ಆರು ಮಂದಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಪ್ಪಣೆಗೆ ವಿರೋಧವಾಗಿ ನಡೆದರೆಂದು ಅವರನ್ನು ಆ ಪಾರ್ಟಿಯಿಂದ ಹೊರತಳ್ಳಲು ನಿರ್ಧಾರವಾಗಿದೆ.

ರಾಜ ವಿಶ್ವೇಶ್ವರ ದಯಾಳ್

ಲಕ್ನೋ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರಾಗಿ ರಾಜ ವಿಶ್ವೇಶ್ವರ ದಯಾಳ್ ಸೇಟರು ಚುನಾಯಿಸಲ್ಪಟ್ಟರು. ಬೇರೆ ಪ್ರತಿಸ್ಪರ್ಧಿಗಳು ಇರಲಿಲ್ಲ. ಇವರ ವಯಸ್ಸು ೪೦. ಹಿಂದುಸ್ಥಾನದ ವೈಸ್ ಚಾನ್ಸಲರುಗಳಲ್ಲಿ ಇವರೇ ಚಿಕ್ಕ ವಯಸ್ಸಿನವರು.

ಪಂಜಾಬ್ ಸರಕಾರದ ಔದಾರ್ಯ

"ವೀರ ಭಾರತ" ಮತ್ತು "ಜಾಮ್ ಜಾಮ್" ಪತ್ರಿಕೆಗಳಿಂದ ಕೇಳಲಾಗಿದ್ದ ಸೆಕ್ಯುರಿಟಿಗಳನ್ನು ಹಿಂದಿರುಗಿಸುವಂತೆ ಪಂಜಾಬ್ ಸರಕಾರವು ಅಪ್ಪಣೆಮಾಡಿದೆ.

ನಿಮ್ಮ ಶ್ವಾಸಕ್ಕೆ ವಾಸನೆ ಇದ್ದರೆ ನೀವು ಆರೋಗ್ಯವನ್ನು ಅನುಭವಿಸಲಾರಿರಿ

ಅನುನಿತ್ಯವೂ ನಮ್ಮ ಯಕೃತ್ತಿನಿಂದ ಎರಡು ಪೈಂಟ್ ಪಿತ್ತದ ದ್ರವವು ಕರುಳೊಳಗೆ ಸರಿಯದಿದ್ದರೆ ನಮ್ಮ ಚಲನಗಳು ಸ್ಫಟ್ಟಿಯಾಗಿ, ಮಲಬದ್ಧತೆಯುಂಟಾಗುತ್ತದೆ ಮತ್ತು ನಮ್ಮ ಆಹಾರವು ಅಸ್ವಾಭಾವಿಕವಾಗಿ ನಮ್ಮ 28 ಫೀಟಿನ ಕರುಳುಗಳಲ್ಲಿ ಹಾಳಾಗುತ್ತದೆ. ಈ ಹೊಲಸು ಪ್ರತಿ ಕಿರು ನಿಮಿಷಗಳಿಗೊಮ್ಮೆ ನಮ್ಮ ದೇಹದಲ್ಲೆಲ್ಲಾ ವಿಷವನ್ನು ಕಳುಹಿಸುತ್ತದೆ. ಅದು ನಮ್ಮನ್ನು ಮ್ಲಾನಚಿತ್ತರನ್ನಾಗಿಯೂ, ಜಡಸ್ವಭಾವದವರನ್ನಾಗಿಯೂ ಯಾವದಕ್ಕೂ ಬಾರದವರನ್ನಾಗಿಯೂ ಮಾಡುತ್ತದೆ. ನಮ್ಮ ಮಿತ್ರರು ಈ ಹೊಲಸು ನಮ್ಮ ಬಾಯಿಯಿಂದ ಹೊರಡುವದನ್ನು ಅನುಭವಿಸಿ ಅದನ್ನು ದುರ್ವಾಸನಾಮಯವಾದ ಶ್ವಾಸವೆನ್ನುತ್ತಾರೆ. ಭೇದಿಯ ಮತ್ತು ಬಾಯಿ ಮುಕ್ಕಳಿಸುವ ಇತರ ಔಷಧಗಳು ಸ್ವಲ್ಪ ಮಟ್ಟಿಗೆ ಮಾತ್ರ ಸಹಾಯ ಮಾಡುವವು ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸಿ. ಅವುಗಳೆರಡು ಪೈಂಟ್ ಪಿತ್ತದ್ರವವು ಸರಾಗವಾಗಿ ಸುರಿಸುತ್ತವೆ. ಮತ್ತಾಗ ನೀವು 'ಇನ್ನೂ ಇನ್ನೂ' ಹುರುಪುಗೊಂಡವರಾಗುತ್ತೀರಿ. ಕಾರ್ಟರರ ಲಿಟ್ಲ್ ಲಿವರ್ ಪಿಲ್ಸ್ ಎಂಬ ಹೆಸರಿನಿಂದಲೇ ಕೇಳಿರಿ ಮತ್ತು ನೀವು ಕೇಳಿದುದನ್ನೇ ತೆಗೆದುಕೊಳ್ಳಿ.

ಇಂದು ನಿನ್ನ ಹಲ್ಲುಗಳನ್ನು
ನೀನು **ಮೆಕ್ಲೀನ್**ನಿಂದ
ಉಜ್ಜಿರುವಿಯೇ?

ನಿಶ್ಚಯವಾಗಿಯೂ, ವಿಚಿತ್ರ!

ಥಳಥಳಿಸುವ ಬಿಳೇ ಹಲ್ಲುಗಳು, ಆರೋಗ್ಯವಾದ ವಸಡು, ಸ್ವಚ್ಛ ಹಾಗೂ ತಂಪಾಗಿರುವ ಬಾಯಿ, ಇವಕ್ಕಾಗಿ **ಮೆಕ್ಲೀನ್ಸ್** ಉಪಯೋಗಿಸಿರಿ. ಇದು ಬೇಗನೇ ಕೆಲೆಗಳನ್ನು ಹೋಗಲಾಡಿಸಿ, ಬಿಳುಪನ್ನೇರಿಸಿ, ಹಲ್ಲುಗಳಿಗೆ ಮೆರಗು ಕೊಡುವುದು,—ಮತ್ತೆ ಇದರ ಉಪಯೋಗದ ಖರ್ಚು ಮಿತವಾಗಿದೆ.

ಎಲ್ಲಾ ಕೆಮಿಸ್ಟ, ಸ್ಟೋರ್‌ಗಳಲ್ಲಿ ವಿಕ್ರಯಿಸಲ್ಪಡುತ್ತದೆ.

ಮಾಜಿ ಷಹಾರವರ ವಿಚಾರಣೆ

ಈಗ ಇಸ್ಪಹಾನಿನ ತಮ್ಮ ನಿವಾಸ ನಲ್ಲಿರುವ ಮಾಜೀ ಷಹಾರವರ ವಿಚಾರಣೆ ನಡೆಯಬೇಕೆಂದು ಇರಾನಿನ ಪಾರ್ಲಿಮೆಂಟ್ ಕೇಳಿದೆ. ಇರಾನಿನಲ್ಲಿ ತಮಗಿರುವ ಆಸ್ತಿಸ್ವಾಸ್ಥ್ಯಗಳನ್ನು ಬಿಟ್ಟು ಕೊಡುವ ಕರಾರಿಗೆ ದಸ್ಕತು ಹಾಕಿಸುವುದಕ್ಕಾಗಿ ಇರಾನಿನ ಇಬ್ಬರು ಮಂತಿಗಳು ಷಹಾರಲ್ಲಿಗೆ ತೆರಳಿದ್ದಾರೆ.

ಮಾಜಿ ಷಹಾರವರು ಅಮೆರಿಕದಲ್ಲಿ ೫೦ ಲಕ್ಷ ಪೌಂಡುಗಳನ್ನೂ ಬ್ರಿಟನಿನಲ್ಲಿ ಅದಕ್ಕಿಂತಲೂ ಭಾರೀ ಮೊತ್ತವನ್ನೂ ವಿನಿಯೋಗಿಸಿದ್ದಾರಾಗಿಯೂ ಇರಾನ್ ರಾಜರ ರತ್ನಾಭರಣಗಳನ್ನು ನ್ಯಾಶನಲ್ ಬ್ಯಾಂಕಿನಲ್ಲಿ ಭದ್ರವಾಗಿ ಇರಿಸಿದ್ದಾರಾಗಿಯೂ ತಿಳಿದು ಬಂದಿದೆ.

ಇರಾನಿನಲ್ಲಿ ಪ್ರಧಾನ ಮಿ। ಫೆರೋಕಿಯವರು ಹೊಸ ಮಂತ್ರಿಮಂಡಲ ರಚಿಸಿದ್ದಾರೆ. ಅದರಲ್ಲಿ ಹೆಚ್ಚಿನವರು ಹಳೆಯ ಮಂತ್ರಿಗಳೇ. ಇರಾನ್, ರಾಷ್ಟ್ರದ ಗುತ್ತಿಗೆಗಳೆಲ್ಲವನ್ನೂ ರದ್ದು ಮಾಡಲಾಗುವುದೆಂದು ತಿಳಿದು ಬಂದಿದೆ. ಅಲ್ಲದೆ ರಾಷ್ಟ್ರದ ಸುಧಾರಣೆಗಳಿಗಾಗಿ ಹಲವು ಕಮಿಶನುಗಳೂ ಏರ್ಪಟ್ಟಿವೆ. ಮಾಜಿ ಷಹಾರಿಂದ ಅನ್ಯಾಯವಾಗಿ ಶಿಕ್ಷಿಸಲ್ಪಟ್ಟವರಿಗೆ ಪರಿಹಾರ ಸಲ್ಲಲಿದೆ.

ಬಸ್ರದ ಭವಿಷ್ಯ

ಮಧ್ಯ ಪೂರ್ವದ ವಿದ್ಯಮಾನಗಳು ಬಸ್ರಾದ ಪ್ರಾಮುಖ್ಯತೆಯನ್ನು ಹೆಚ್ಚಿಸಿವೆ. ಅದು ಸರಬರಾಯಿಗಳ ಒಂದು ಹೆಬ್ಬಾಗಿಲಾಗಿದೆ. ಪೆಲ್‌ಸ್ತಾಯ್ನ್, ಸಿರಿಯಾ, ಟರ್ಕಿಗಳು ಪರ್ಷಿಯನ್ ಕೊಲ್ಲಿಯ ಮೂಲಕ ತಮಗೆ ಬೇಕಾದ ಯಾವತ್ತು ಸರಬರಾಯಿಗಳನ್ನೂ ಪಡೆಯಬಹುದಾಗಿದೆ. ಯುದ್ಧ ಸಾಮಗ್ರಿಗಳೂ ಇತರ ಸಾಧನಗಳೂ ನಿತ್ಯವೂ ಟರ್ಕಿಗೆ ಧಾರಾಳ ಪ್ರಮಾಣದಲ್ಲಿ ಸಾಗುತ್ತಿವೆ. ಬಸ್ರಾ ರಷ್ಯದ ಸರಬರಾಯಿಗೂ ಸಹಾಯ ಮಾಡಬೇಕಾದೀತು. ಹೀಗಾಗಿ ಆ ಇಡೀ ದೇಶದಲ್ಲಿ, ಕೊಲ್ಲಿಯಲ್ಲಿ ಹೆಜ್ಜೆತ್ತಿರುವ ಹಡಗುಗಳ ಸಾಮಗ್ರಿಗಳನ್ನು ಸಾಗಿಸುವ ಜನರ ಸಂಖ್ಯೆ ಹೆಚ್ಚುತ್ತಿದೆ. ಎಲ್ಲೆಲ್ಲಿಯೂ ಅವರದೇ ಡೇರೆಗಳು ತುಂಬಿವೆ. ಈಗ ಬಸ್ರದಲ್ಲಿ ಹಡಗುಗಳ ಸರಕುಗಳನ್ನು ಸಾಗಿಸುವ ಕೆಲಸ ಒಂದಕ್ಕೆ ಐದು ಪಾಲಷ್ಟು ಬೆಳೆದಿದೆ. ಬಸ್ರದ ಪ್ರಾಮುಖ್ಯತೆ ವಿಮಾನ ಮಾರ್ಗದ ಮೂಲಕವೂ ಹೆಚ್ಚಿದೆ.



ಪಂಜಾಬ್ ಪ್ರಧಾನರು ಲೀಗ್ ಕಾರ್ಯಕಾರಿಯಿಂದ ಜಾರುವರೆ?

ಬಂಗಾಳದ ಪ್ರಧಾನರಂತೆ ಪಂಜಾಬಿನ ಸರ್ ಸಿಕಂದರರೂ ಮುಸ್ಲಿಂ ಲೀಗ್ ಕಾರ್ಯಕಾರಿ ಮಂಡಲಿಯ ಸದಸ್ಯತನಕ್ಕೆ ರಾಜಿ ಕೊಡಬಹುದೆಂಬ ವದಂತಿ ಹರಡಿದೆ.

ಸೂರ್ಯ ಗ್ರಹಣ

ಕಳೆದ ಸೂರ್ಯ ಗ್ರಹಣ ಕಾಲದಲ್ಲಿ ಕುರುಕ್ಷೇತ್ರದಲ್ಲಿ ಅಲ್ಲಿನ ಪವಿತ್ರ ತೀರ್ಥದ ಸರೋವರಗಳಲ್ಲಿ ಸುಮಾರು ೨-೩ ಲಕ್ಷ ಮಂದಿ ಯಾತ್ರಿಕರು ಸ್ನಾನ ಮಾಡಿದರು; ಕಲ್ಕತ್ತೆಯಲ್ಲಿ ಸ್ನಾನ ಘಟ್ಟಗಳಲ್ಲಿ ಒಂದು ಲಕ್ಷ ಮಂದಿ ಯಾತ್ರಿಕರು ಗಂಗಾ ಸ್ನಾನ ಮಾಡಿದರು. ಇದರಲ್ಲಿ ಒಬ್ಬರು ಮುಳುಗಿ ಸತ್ತರು. ಒಂದು ದೋಣಿಗೆ-ಹುಲ್ಲು ಹೇರಿದ್ದ ದೋಣಿ-ಬೆಂಕಿ ಹತ್ತಿ ಗಲಭೆಯಾದರೂ ಬೆಂಕಿ ನೊಂದಿಸಲಾಯಿತು. ಪ್ರಯಾಗ ಘಾಟಿನಲ್ಲಿ ಅಲ್ಲಿ ಹಾಕಿದ್ದ ತಾತ್ಕಾಲಿಕ ಸೇತುವೆ ಮುರಿದು, ಜನರು ನೀರಿಗೆ ಬಿದ್ದು ೩ ಮಂದಿಯನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಬೊಂಬಯಿಯಲ್ಲಿ ಸಮುದ್ರ ಸ್ನಾನಕ್ಕಾಗಿ, ಆಲ್ಲಹಾಬಾದಿನಲ್ಲಿ ಗಂಗಾ ಯಮುನಾ ಸಂಗಮ ಸ್ನಾನಕ್ಕಾಗಿ ಸಾವಿರಾರು ಮಂದಿ ನೆರೆದಿದ್ದರು. ಕಾಶಿಯಲ್ಲಿ ಸುಮಾರು ೩॥ ಲಕ್ಷ ಮಂದಿ ಯಾತ್ರಿಕರು ನೆರೆದು, ೧೫೦ ಮಂದಿಗೆ ಪ್ರಥಮ ಸಹಾಯದ ಚಿಕಿತ್ಸೆ ನಡೆಸಲಾಯಿತು.

ತಲಕಾವೇರಿ ಜಾತ್ರೆಗೆ ನಿರ್ಬಂಧ

ಇದೇ ಬರುವ ಅಕ್ಟೋಬರ ತಾ. ೬ರಿಂದ ೨೨ರ ವರೆಗೆ, ತಲಕಾವೇರಿ ಜಾತ್ರೆಗೆ ಯಾತ್ರಿಕರಾಗಿ ಪ್ಲೇಗ್ ಇರುವ ಸ್ಥಳಗಳಿಂದ ಯಾರೂ ಹೋಗಕೂಡದೆಂದು ಕೊಡಗಿನ ಅಧಿಕಾರಿಗಳು ನಿರ್ಬಂಧ ಹಾಕಿರುತ್ತಾರೆ.

ದಕ್ಷಿಣ ಕನ್ನಡದಲ್ಲಿ ಪ್ಲೇಗ್

ಕಳೆದ ತಾ. ೧೮ರ ಬಳಿಕ ಕುನ್ಯಾಡಿನಲ್ಲಿ ಇಬ್ಬರಿಗೆ ಈ ಜಾಡ್ಯ ಅಂಟಿದೆ; ಮರಣಗಳಿಲ್ಲ.

ಜಾತ್ರೆ!

ಮಂಗಳೂರಿಂದ ಬೆಳ್ತಂಗಡಿ ರೋಡಿನ ೨೫ನೇ ಮೈಲುಕಲ್ಲಿನ ಬಳಿಯಲ್ಲಿ ಕಾವಳಕಟ್ಟೆಯ ಗುರುಬೆಟ್ಟಿನಲ್ಲಿ ಒಂದು ಜಾನುವಾರು ಜಾತ್ರೆಯು ಇದೇ ವರುಷದ ಒಕ್ಟೋಬರ ತಿಂಗಳ ತಾರೀಕು ೧೫ನೇ ಬುಧವಾರ ಬೆಳಿಗ್ಗೆ ೧೦ ಘಂಟೆಗೆ ಬಹು ಸಂಭ್ರಮದಿಂದ ತೆರೆಯಲ್ಪಡುವದು. ಪ್ರತಿವರುಷ ಈ ಜಾತ್ರೆಯು ಇದೇ ತಿಂಗಳಲ್ಲಿ ಜರಗುವುದಾಗಿ ನೇಮಿಸಿರುವದು. ಸದ್ರಿ ಸ್ಥಳದಲ್ಲಿ ೧೯೧೯-೧೯೪೧ರಿಂದ ಪ್ರತಿ ಶನಿವಾರ ಸಂತೆಯು ಜರಗುವುದು ಎಂದು ತಿಳಿದು ಬರುತ್ತಿದೆ.

ನೋಟೀಸು

ದ. ಕ. ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 93/1941.

1. ಮ್ಯಾನರ ಶಂಕ್ರನಾರಾಯಣ 2. ಮ್ಯಾನರ ವೆಂಕಟೇಶ (ಅನಂತ್ತ ಬಾಳ್ತಿಲ್ಲಾಯರ ಮ್ಯಾನರ ಮಕ್ಕಳು– ಈಗ ಹಾಲಿ ಪುತ್ತೂರು ಕಸಬೆಯಲ್ಲಿರುತ್ತಾರೆ. ಡಿಸ್ಟ್ರಿಕ್ಟ್ ಕೋರ್ಟು O. P. No. 109/38ರಲ್ಲಿ ನೇಮಕಪಟ್ಟ ಇವರ ಪ್ರೊಪರ್ಟಿ ಗಾರ್ಡಿಯನ್ M. ಸದಾಶಿವರಾವ್ ವಕೀಲ ಪುತ್ತೂರು)— **ಅರ್ಜಿದಾರರು.**

ಭಾಗೀರತಿ, ಎಲಿಕೆಳ ಕೃಷ್ಣ ಶಿಬರಾಯರ ಹೆಂಡತಿ. ಪುತ್ತೂರು ತಾಲೂಕು ಪಟ್ಟವೊಗ್ರ ಮತ್ತು ಇತರ ಸಮಸ್ತರಿಗೆ ಸಹ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದರಿ ಅರ್ಜಿದಾರರ ತಾಯಿ, ಕೊಕ್ಕಾಡಿ ಗ್ರಾಮದ ಕುಂಡಡ್ಕ ಅನಂತ್ತ ಬಾಳ್ತಿಲ್ಲಾಯರ ಎಧವೆ ಹಾಲಿ ಮೃತ ಪಟ್ಟ ಗೌರಮ್ಮಗೆ ಹಸನೆ ಬ್ಯಾರಿಯು ತಾ. 25–6–38ರಲ್ಲು ರೂ. 100ಕ್ಕೆ ಬರಕೊಟ್ಟ ಡಿ. ಪ್ರೊ. ನೋಟಿನ ಪ್ರಕಾರ ಬಹಾ ಅಸಲು ಬಡ್ಡಿ ರೂ. 119–15–9, ಅಬ್ದುಲ್ ಖಾದ್ರಿ ಸಾಹೇಬ ಮತ್ತು ಚೆರಿಯಬ್ಬ ಬ್ಯಾರಿ ಸಹ ತಾ. 31–8–38ರಲ್ಲು ರೂ. 140ಕ್ಕೆ ಬರಕೊಟ್ಟ ಡಿ. ಪ್ರೋ. ನೋಟು ಪ್ರಕಾರ ಬಹ ಅಸಲು ಬಡ್ಡಿ ರೂ. 166–5–11, ಕೂಡಾ ಈ ಎರಡು ಸಾಲಗಳ ವಸೂಲಿ ಕುರಿತು ತಮಗೆ Succession Certificate ಕೊಡಿಸಬೇಕೆಂತ ವಗೈರೆ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿ ತಾ. 9–10–41ಕ್ಕೆ ತನ್ನಿಗೆ ಇಟ್ಟಿರುತ್ತದೆಂತ್ತಲೂ ಆ ಕುರಿತು ಆಕ್ಷೇಪವುಳ್ಳವರು ಸದರಿ ವಾಯಿದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಃ ಯಾ ವಕೀಲರ ದ್ವಾರ ಹಾಜರಾಗಿ ಉದಹರಿಸತಕ್ಕದ್ದೆಂತಲೂ, ತಪ್ಪಿದರೆ ನಿಮ್ಮ ಶಿವ್ಯಾ ಯುಕ್ತ ಕಂಡಂತೆ ತೀರ್ಮಾನಿಸಲ್ಪಡುತ್ತದೆಂತ ಸಹ ಈ ಮೂಲಕ ನಿಮಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸಿಯದೆ.

M. Sadashiva Rao,
Petitioner.

Puttur, 15–9–1941.

ಶ್ರೀಮತಿ ಕಮಲಾದೇವಿಯವರು

ಶ್ರೀಮತಿ ಕಮಲಾದೇವಿಯವರು (ದಕ್ಷಿಣ ಕನ್ನಡ ಜಿಲ್ಲೆಯವರು) ಅಮೆರಿಕದಲ್ಲಿನ ತಮ್ಮ ಉಪನ್ಯಾಸಗಳ ದೀರ್ಘ ಪ್ರವಾಸವನ್ನು ಮುಗಿಸಿ, ಇಂಡಿಯಕ್ಕೆ ಹೊರಟು ಕಳೆದ ಶನಿವಾರ ಕೊಲೊಂಬಕ್ಕೆ ತಲುಪಿರುವರು.

ರೂ. ೨ ಲಕ್ಷ ಜಮೆ

ಕರಾಚಿ ಯುದ್ಧಸಪ್ತಾಹದ ವಿವಿಧ ಪ್ರದರ್ಶನವನ್ನು ಸುಮಾರು ೧ ಲಕ್ಷ ಮಂದಿ ನೋಡಿದ ಪರಿಣಾಮವಾಗಿ ೨ ಲಕ್ಷ ರೂಪಾಯಿಗಳು ಇಷ್ಟರಲ್ಲೇ ಜಮೆಯಾಗಿದೆ.

ನೂರ ಹತ್ತು ವರುಷದ ಯುದ್ಧಗಳು

೧೮೩೦–೩೯ ಪೆರ್ಶಿಯ ವಿರುದ್ಧ ಬೆಲ್ಜಿಯಮ್ ಪೆತುಂಗಾಲ್ ಸ್ಪೈನ್. ೧೮೩೧–೩೭ ಇಟಲಿ ಸ್ವಾತಂತ್ರ್ಯ ಯುದ್ಧ. ೧೮೪೧–೪೧ ತುರ್ಕಿ ಮತ್ತು ಈಜಿಪ್ಟ್. ೧೮೪೧–೪೨ ಇಂಗ್ಲೆಂಡ್ ಅಫ್‌ಘಾನಿಸ್ಥಾನ. ೧೮೪೩–೪೩ ಇಂಗ್ಲೆಂಡ್ ಮತ್ತು ಚೀನ. ೧೮೪೪ ಫ್ರಾನ್ಸ್ ಮೋರೋಕೋ. ೧೮೪೫–೪೬ ಬ್ರಿಟಿಷ್ ಸೀಖ್. ೧೮೪೫–೪೭ ಓಸ್ಟ್ರಿಯಾ ಸಾರ್ಡಿನಿಯಾ. ೧೮೪೬ ಇಂಗ್ಲೆಂಡ್–ಬ್ರಹ್ಮದೇಶ. ೧೮೫೪–೫೬ ಇಂಗ್ಲೆಂಡ್, ರಷ್ಯಾ (ಕ್ರೀಮಿಯನ್ ಯುದ್ಧ.) ೧೮೫೬–೬೦ ಇಂಗ್ಲೆಂಡ್ ಮತ್ತು ಫ್ರಾನ್ಸ್ ವಿರುದ್ಧ ಚೀನ.

೧೮೫೭ ಇಂಗ್ಲೆಂಡ್ ಹಿಂದುಸ್ಥಾನ (ಸ್ವಾತಂತ್ರ್ಯ ಯುದ್ಧ.) ೧೮೫೪–೬೫ ಪ್ರಶಿಯಾ, ಓಸ್ಟ್ರಿಯಾ ವಿರುದ್ಧ ಡೆನ್ಮಾರ್ಕ್. ೧೮೬೬ ಪ್ರಶಿಯಾ ಓಸ್ಟ್ರಿಯಾ. ೧೮೬೬ ಇಂಗ್ಲೆಂಡ್ ಅಬಿಸೀನಿಯಾ. ೧೮೬೦ ಫ್ರಾನ್ಸ್ ಪ್ರಶಿಯಾ. ೧೮೭೮–೮೦ ಇಂಗ್ಲೆಂಡ್ ಅಫ್‌ಘಾನಿಸ್ಥಾನ. ೧೮೭೯–೧೮೮೧ ಜುಲೂ ಯುದ್ಧ. ೧೮೮೦–೧೯೦೨ ಇಂಗ್ಲೆಂಡ್, ಆಫ್ರಿಕಾ, ಬೋಅರ್ ಯುದ್ಧ.

೧೮೮೩ ಸರ್ವಿಯಾ ಬಲ್ಗೇರಿಯಾ. ೧೮೮೫–೮೬ ಇಟಲಿ ಅಬಿಸೀನಿಯಾ. ೧೮೮೮–೯೧ ಜರ್ಮನಿ ಪಶ್ಚಿಮ ಆಫ್ರಿಕಾ. ೧೮೯೩ ಫ್ರಾನ್ಸ್ ಮಾಡಾಗಾಸ್ಕರ್. ೧೮೯೭–೯೮ ತುರ್ಕಿ, ಗ್ರೀಸ್. ೧೯೦೦ ಯುರೋಪ್ ರಾಷ್ಟ್ರ ವಿರುದ್ಧ ಚೀನ ಮತ್ತು ಬ್ರಹ್ಮದೇಶ. ೧೯೦೪ ಇಂಗ್ಲೆಂಡ್ ತಿಬೇಟ. ೧೯೦೪ ರಶಿಯಾ ಜಪಾನ್. ೧೯೦೭ ಫ್ರಾನ್ಸ್ ಮೇರೇಕಕೊ. ೧೯೦೭–೧೪ ಇಟಲಿ ಅಬಿಸೀನಿಯ. ೧೯೧೨–೧೪ ಇಟಲಿ ತುರ್ಕಿ. ೧೯೧೨–೧೪ ಬಾಲ್ಟನ್ ಯುದ್ಧ.

೧೯೧೪–೧೮ ಪ್ರಥಮ ಮಹಾಯುದ್ಧ. ಬ್ರಿಟನ್, ಫ್ರಾನ್ಸ್, ರಶಿಯಾ, ಬೆಲ್ಜಿಯಮ್, ಇಟಲಿ, ಜಪಾನ್, ರುಮೇನಿಯಾ, ಪೋರ್ತುಗಲ್, ಗ್ರೀಸ್, ಅಮೇರಿಕಾ, ಎರುದ್ಧ ವಿರ್ಮನಿ, ಓಸ್ಟ್ರಿಯಾ, ಹಂಗೇರಿ, ತುರ್ಕಿಸ್ಥಾನ, ಬಲ್ಗೇರಿಯಾ, ೧೯೨೦–೨೧ ರಶಿಯಾ ಪೋಲೆಂಡ್. ೧೯೨೨ ಗ್ರೀಸ್ ತುರ್ಕಿಸ್ಥಾನ. ೧೯೨೨ ಸ್ಪೇನ್ ಮೇರೋಕಕೊ.

೧೯೩೫ ಇಂಗ್ಲೆಂಡ್ ಅಫ್‌ಘಾನಿ. ೧೯೩೫ ಇಟಲಿ ಅಬಿಸೀನಿಯಾ. ೧೯೩೬ ಸ್ಪೈನ್ ಅತಿಕಲಹ. ೧೯೩೯ ಜರ್ಮನಿ ಜಕೋಸ್ಲೋವೇಕಿಯಾ. ೧೯೩೯ ದ್ವಿತೀಯ ಮಹಾಯುದ್ಧ (ಜರ್ಮನಿ ವಿರುದ್ಧ ಇಂಗ್ಲೆಂಡ್, ಫ್ರಾನ್ಸ್, ಪೋಲೆಂಡ್, ಬೆಲ್ಜಿಯಮ್, ಹೋಲೆಂಡ್, ರುಮೇನಿಯಾ, ಗ್ರೀಸ್, ರಶಿಯಾ ವಗೈರೆ.)

ಐ. ಸಿ. ಯಸ್. ಆಫೀಸರರ ಕ್ಷಮಾಯಾಚನೆ

ನಾಗ್ಪುರದಲ್ಲಿ ಒಂದು ಯುದ್ಧ ಪ್ರಚಾರದ ಸಭೆ ಸೇರಿದ್ದಾಗ ಜನಗಳು ಗಲಭೆ ಮಾಡಿ, ಅಲ್ಲಿನ ಡೆ। ಕಮಿಶ್ನರ್ ಎಂ. ಎ. ಜಿ. ಎಫ್. ಫರ್ಕೂಹರ್ ಐ. ಸಿ. ಯಸ್. ಇವರ ಮೇಲೆ ಕಲ್ಲುಗಳು ಕಸಬರಿಗೆ ಮೊದಳಾದವನ್ನು ಬಿಸಾಡಿದ್ದರು. ಮಿ. ಫರ್ಕೂಹಾರರೂ ಪಂಡಿತ ನೆಹರುಗಳನ್ನು "ಕ್ವಿಸ್‌ಲಿಂಗ್" ಎಂದು ಹೀಗಳೆದಿದ್ದರು ಆ ಸಭೆಯಲ್ಲಿ. ಈಗ ಹಾಸೆ ತಾನಾಡಿದುದು ಪುಡಿತರ ವಿಷಯದಲ್ಲಿ ಸರಿಯಲ್ಲವೆಂದು ನಾಗ್ಪುರದ ಆ ೭। ಕಮಿಶನರರು ಕ್ಷಮೆ ಕೇಳಿದ್ದಾರೆ.



ಸ್ವಿಸ್ ತಯಾರೀ ಅತ್ಯಾಧುನಿಕ
ಫೇವರ್-ಲ್ಯೂಬಾ
ಟ್ಯಾಂ-ಪೀಸ್

(ಸಮಯ–ಸೂಚಿ)

ಎತ್ತರಳ॥", ಡ್ಯಾಯಲ್ ೩" ೩೦ ಗಂಟೆಗಳ ಚಲನೆ.
ಲಕ್ಷಲಗಿ ನಿಕ್ಕೆಲ್ ಮುಲಾಂ ಕೇಸ್,
ನಿಯತ ಎಚ್ಚರಿಕೆ, ಸೆಕುಂದ
ಮುಳ್ಳುಗಳಿಲ್ಲ ರೂ. ೧೦–೦–೦
ಲಕ್ಷಲಗಿ ಬಣ್ಣದ (ಕೆಂಪು ಆಥವಾ ನೀಲ)
ಕೇಸ್, ನಿಯಮಿತ ಎಚ್ಚರಿಕೆ, ಸೆಕುಂದ
ಮುಳ್ಳುಗಳಿಲ್ಲ ರೂ. ೯–೮–೦
ಲಕ್ಷಲಗಿ ನಿಕ್ಕೆಲ್ ಮುಲಾಂ ಕೇಸ್
ನಿಯತ ಎಚ್ಚರಿಕೆ, ಸೆಕುಂದ
ಮುಳ್ಳು ಸಹಿತ ರೂ. ೧೦–೮–೦
ಲಕ್ಷಲಳ ನಿಕ್ಕೆಲ್ ಮುಲಾಂ ಕೇಸ್ ಬಾರಿ
ಬಾರಿಗೂ ಎಚ್ಚರಿಕೆ (ಅಲಾರಮ್)
ಸೆಕುಂದ ಮುಳ್ಳುಸಹಿತ ರೂ. ೧೧–೮–೦
ರೇಡಿಯಂ ಡ್ಯಾಯಿಲ್‌ಗೆ
ರೂ. ೧–೮–೦ ಪ್ರತ್ಯೇಕ.

ಸ್ವಿಸ್ ಫ್ಯಾಕ್ಟರಿಗಳಿಂದ ನೇರವಾಗಿ ಫೆವರ್ ಲ್ಯೂಬಾಕ್ಕೆ ಅತ್ಯಾಧುನಿಕ ಅಲಾರಮ್ ಟ್ಯಾಂ-ಪೀಸ್‌ಗಳು ಬಂದಿವೆ. ಚಿಕ್ಕವೂ ಉಪಯುಕ್ತವೂ ಆಗಿದ್ದು, ಆಧುನಿಕ ಸುಧಾರಣೆಯೊಂದನ್ನು ಬಿಡದೆ ಕೂಡಿಸಲ್ಪಟ್ಟು, ಫೆವರ್-ಲ್ಯೂಬಾದ ಉತ್ತಮ ಪ್ರಮಾಣವನ್ನು ಸಂಪೂರ್ಣ ಸಮರ್ಥಿಸಲ್ಪಟ್ಟಿದೆ.

ನೀವು ಇದಿರು ನೋಡುವ
ಅಲಾರಮ್ ಟ್ಯಾಂ-ಪೀಸ್
ನಿಶ್ಚಯವಾಗಿ ಇದೇ!



ಸ್ವಾಕ ಇರುವಾಗಲೇ
ನಿಮಗೆ ಬೇಕಾದುದನ್ನು
ಈಗಲೇ ಕೊಂಡುಕೊಳ್ಳಿ

Favre-Leuba
& CO. LTD.
BOMBAY CALCUTTA

LIFE INSURANCE

Is the one investment which in peace or war knows no depreciation. It is the only scientific means which plans with prudence and certainty against the hazards of unknown tomorrow.

EVERY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

Let "Popular", the successful and progressive life office of your own district, plan your future.

THE POPULAR INSURANCE CO., LTD.,
Head Office: **MANGALORE, S. I.**

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore